MR. SPEAKER.— Amendment moved:

"That the word "Mysore" shall be omitted."

The question is:

"That the word 'Mysore' in Clause 64 shall be omitted."

The motion was adopted.

MR. SPEAKER.—The question is:

"That Clause 64, as amended, do stand part of the Bill."

The motion was adopted.

Clause 64 amended was added to the Bill.

MR. SPEAKER.—The question is.-

"That clauses 65 to 89, both inclusive stand part of the Bill."

The motion was adopted

Clauses 65 to 89, both inclusive, were added to the Bill.

MR. SPEAKER.—The question is:

"That clause 1, the Title and the Preamble stand part of the Bill."

The motion was adopted.

Clause 1, the Title and the Preamble were added to the Bill.

Motion to pass.

Sri D. DEVARAJ URS.—I beg to move:

"That the Mysore Housing Board Bill, 1962, as amended, be passed."

MR. SPEAKER.—The question is:

"That the Mysore Housing Board Bill, 1962, as amended, be Passed."

The motion was adopted.

THE MYSORE FOREST BILL, 1962.

Motion to Consider.

†Sri B. RACHAIAH.— (Minister for Forests and Fisheries).- I beg to move:

"That the Mysore Forest Bill, 1962, be taken into Consideration."

MR. SPEAKER.—Motion moved:

That the Mysore Forest Bill, 1962, be taken into consideration."

Sri B. RACHAIAH.—In placing this Bill for the consideration of the House, I would like to make a few remarks on the salient features of this Bill. Sir, like the proverbial banian tree, the forests have their association with mankind from time of Adam. Many a civilisation has flourished and disappeared, but forest continued to stay even today as though it is an indication of the human history. Forest had influence on the culture and life of manking and stand as an index of civilisation that mankind has achieved during the life time of the human race. They tell the sad tales of human sufferings and also the glorious days that mankind had in the past. So, without the association of man, forest cannot flourish. Likewise man cannot prosper without these forests. They have an influence over atmosphere, over our own culture and our own spiritual attainment, Our grandfathers had built up temples in forests; after 50 years they used to go to forest and spend their time.

MR. SPEAKER.—I feel very much embarrassed. I am not inclined to go to forest.

Sri B. RACHAIAH.— The forests have influenced great people to write great epics. Hence, the great men have attained their reunciation in the forest itself. So, with this background, one will get the

(Sri B. RACHAIAH)

importance of the forest, and its place in human life. At present, forests are administered in the different integrated parts by different laws prevailing in the integrated areas. Now, the present Bill seeks to have a uniform legislation. You find in the present Bill many of the salient features found in various Forest Acts prevailing at present in the integrated parts. I may refer here Sir, to three important salient featurrs which I have in my mind. The most important one is Chapter 5 and it deals with provision relating to the management and control over private forests. The object of this provision is to prevent private parties to exploit the forest wealth without regard to any sustained efforts according to working plots. So, in such cases, this Bill provides for taking over the management of private forests. Under Chapter 10, the most important provision relates to sandalwood trees. Now, Sir, according to the old Mysore Forest Bill, sandal trees has been declared as a reserve tree and the State Government has the power to cut and remove it and even the produce goes to the State exchequer but only a nominal royalty is being paid to the persons in whose lands the sandal trees are grown. But according to the Madras Forest Act and the Bombay Forest Act, even though a sandal tree wherever it is grown is deemed to be a reserve tree' the right to cut and remove is given to private owners on permission. So, on account of this anomaly, there have been several cases of smuggling on a large scale and sandal trees have been cut and removed by certain persons. To prevent that, this Bill has been brought forward. We have got two sandal oil factories in Mysore State. Just to give them an assurance of continuous supply of sandal wood, this provision is necessary. Chapter 10 of the Bill provides taking over the rights over alienation of sandal trees wherever it grows, whether it grows in private lands or in Government lands, and also provision has been made to give bonus to the individuals in whose land these sandal trees are grown. This procedure is prevailing in Coorg State wherein individual owner has to protect sandalwood trees and he is entitled for half the cost of the trees. So, according to this memorandum regarding delegated legislation, we have to give certain sizable portion of the revenue for the owners in whose lands sandal trees are grown. The last one is about katechu or commercial produce. This is State reserve according to Madras Act. This is one of the important commercial produce which is also being smuggled from our State Forests. Just to have an effective control and for the better management of the forests, this provision has been incorporated.

This provision is also incorporated. Time and again there have been allegations that forest wealth is being misused by smuggling, etc., and that there is no control. I may incidentally mention that four squads have been appointed. They have detected cases. Cases have been booked and revenues are realised. At the same time, we are also increasing the forest wealth by our extra effort in putting additional areas to afforestation. During the last two plan periods, we have been able to afforest more than 2½ lakhs of acres. In the Third Plan up to September we have been able to bring about plantation in six thousand acres. To have a better administration over these forests and to have increased revenues to the State, it is necessary to have a uniform legislation of this kind.

SRI C. J. MUCKANNAPPA (Sira).—What is the additional revenue that we are going to get by these measures?

SRI B. RACHIAH.—Today we are expecting about 8¼ crores from the forest areas. I hope, by the implementation of this Act, we will be able to get an additional amount of nearly one crore. We will have to work according to our working plan. Of course, we can get twenty crores by cutting down all the timber wealth. But that does not help in any way. We will have to maintain the forest wealth and it must have a corresponding effect. The regeneration and exploitation must have a bearing. Sir, provisions are incorporated here on the lacunaes pointed out by the High Court of our State as well as other States regarding the transit of forest produce. In certain cases, the provisions found in the Central Forest Act have also been incorporated.

SRI C. J. MUCKANNAPPA.—By detecting the illicit smuggling, etc., what is the money we are going to get?

SRI B. RACHIAH.—It will take some time to give details about the amounts recovered.

MR. SPEAKER.—We will have it afterwards.

SRI B. RACHIAH.—There is no extra expenditure involved in bringing this legislation into operation. That is why there is no complicated matter here. This is after all a uniform law and Hon'ble Members will give their valuable thought to this Bill. I commend the Bill to the House.

MR. SPEAKER (Addressing Sri Hutche Gowda).—Kindly read clause 86.

The House will now rise to meet half an hour later.

The House adjourned for recess at Three of the Clock and reassembled at Thirty five minutes past Three of the Clock.

[MR. SPEAKER in the Chair].

MR. SPEAKER.—I have to inform the House that I have received a communication from the Chief Secretary, a circular dated 14-12-62 which I hope all the members have also received, to the effect that arrangements have been made for starting physical training exercises with effect from 14-12-62 at 5-45 P.M. in the open area towards the north between the garages and the Vidhana Soudha building. The I. A. F. Training Command are making necessary arrangements. I have been requested to inform the Hon'ble Members of the State Legislatures that they may be requested to join at the above place at 5-45 P. M. today. So, we will adjourn the House at 5-30 P. M. We will have two hours for this Bill, after which we will refer it to the Select Committee.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ತುಟ್ಟಿಭತ್ಯ ಕೊಡುತ್ತಾರೇನು? ಸ್ವಾಮಿ.

(ನಗು)

MR. SPEAKER.—I have been asked only to intimate the Members and I have done by duty.

†ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಅರಣ್ಯ ಮಂತ್ರಿಗಳು 1962ನೇ ಇಸವಿ ಮೈಸೂರು ರಾಜ್ಯದ ಅರಣ್ಯಶಾಖೆಗೆ ಸಂಬಂಧಪಟ್ಟ ವಿಧೇಯಕವನ್ನು ಈ ಸಭೆಯ ಮುಂದೆ ಈಗತಾನೇ ಮಂಡಿಸಿದ್ದಾರೆ. ಆ ರೀತಿ ಮಂಡಿಸುತ್ತಾ ಮಾನ್ಯ ಮಂತ್ರಿಗಳು ಬಹಳ ಕಾವ್ಯಮಯವಾಗಿ ತಮ್ಮ ಭಾಷಣವನ್ನು ಪ್ರಾರಂಭಮಾಡಿದರು. ಬಹುಶಃ ಅವರ ಮಾತೃಭಾಷೆಯಾದ ಕನ್ನಡದಲ್ಲಿ ಮಾತನಾಡಿದ್ದರೆ ತಮ್ಮ ಭಾಷಣವನ್ನೆಲ್ಲಾ ಇನ್ನೂ ಹೆಚ್ಚು ಸ್ಫೂರ್ತಿಯುತವಾಗಿ ಮತ್ತು ಸ್ಪಷ್ಟವಾಗಿ ಇಡುವುದಕ್ಕೆ ಅನುಕೂಲವಾಗುತ್ತಿತ್ತೇನೋ ಎಂದು ನನಗೆ ಕಾಣುತ್ತದೆ. ಆದರೆ ಇಂಗ್ಲಿಷ್‌ನಲ್ಲಿ ಭಾಷಣ ಮಾಡಿದ್ದರಿಂದ ಆ ರೀತಿ ಇಟ್ಟಿಲ್ಲವೆಂದು ಅರ್ಥವಲ್ಲ. ಬಿಲ್ಲಿನಲ್ಲಿ ಕನ್ನಡದ್ದು

(ಶ್ರೀ ಎಸ್. ಗೋಪಾಲಗೌಡ)

ಬರುವುದು ಅಷ್ಟಾಗಿ ಅತಾರಿಟಿಟಿವ್ ಅಲ್ಲವೆಂದು ಒಂದು ಇದೆಯಲ್ಲಾ! ಈ ಸಂದರ್ಭದಲ್ಲಿ ನಾನೊಂದು ಮಾತನ್ನು ಹೇಳುತ್ತೇನೆ. ನಾನು ಮಲೆನಾಡಿನಿಂದ ಆಯ್ಕೆಯಾಗಿ ಬಂದಿರತಕ್ಕ ಪ್ರತಿನಿಧಿಯಾಗಿರುವುದರಿಂದ ಕಾಡಿನ ಬಗ್ಗೆ ನನಗೆ ಹೆಚ್ಚು ಮಮತೆ ಇರುವುದೇನೋ ಸಹಜ. ಯಾವ ಸಹ್ಯಾದ್ರಿಶ್ರೀಯು ಆ ಕೊಡಚಾದ್ರಿ ಮತ್ತು ಪಶ್ಚಿಮ ಘಟ್ಟಗಳ ವನಗಳು ಬಹಳ ರಮ್ಯತೆಯಿಂದ ಕೂಡಿ ಕುವೆಂಪು ಮೊದಲಾದ ಕವಿಜನರಿಗೆ ಜನ್ಮಸ್ಥಾನ ಮಾಡಿಕೊಟ್ಟಿದೆ, ಅಂಥ ಕವಿಗಳು ಅಲ್ಲಿ ಜನ್ಮತಾಳುವುದಕ್ಕೆ ಈ ವನಸಂಪತ್ತಿನ ಶ್ರೀ ಕಾರಣವೆಂತ ಹೇಳಬಹುದು. ಮಾನ್ಯ ಮಂತ್ರಿಗಳು ಹೇಳಿದಹಾಗೆ ಕಾಡಿಗೂ ಮಾನವನಿಗೂ ನಂಟು ಬಹಳ ಪ್ರಾಚೀನವಾದದ್ದು-ಪುರಾತನವಾದದ್ದು ಅಂತ ಹೇಳಬಹುದು. ವನಸಂಪತ್ತು ಹೆಚ್ಚಾಗಿದ್ದರೆ ಆದರಿಂದ ಮನುಷ್ಯ ಎಷ್ಟು ಲಾಭ ಪಡೆಯಬಹುದು ಎಂಬುದನ್ನು ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಕವಿಗಳೂ ಸಹ ಹಾಗೇ ಹಾಡಿದ್ದಾರೆ—ನಮ್ಮದು "ಸಶ್ಯಶಾಮಲಾದೇಶ" ಎಂತ. ನಮ್ಮ ಕಾಡಿನಲ್ಲಿ ನಮಗೆ ಎಲ್ಲಾ ತರಹೆಯ ಮರಗಳೂ ದೊರೆಯುತ್ತವೆ. ಆದುದರಿಂದ ನಮ್ಮ ದೇಶವು ಬಹಳ ಸಂಪದ್ಯುಕ್ತ ಭರಿತವಾದ ದೇಶ ಅಂತ ಹೇಳಬಹುದು. ಆದರೆ ಈ ದಿವಸ ಇಂಥ ಕಾಡಿನ ಮೇಲೆ ಎಲ್ಲ ರೀತಿಯಲ್ಲೂ ಆಘಾತ ನಡೆಯುತ್ತಿದೆ. ಸಾಮಾನ್ಯವಾಗಿ ಯಾವ ದೇಶದಲ್ಲೇ ಆಗಲೀ ಇರತಕ್ಕ ದೇಶದ ಒಟ್ಟು ವಿಸ್ತೀರ್ಣದಲ್ಲಿ ಮೂರನೆಯ ಒಂದು ಭಾಗ ಈ ಕಾಡಿರತಕ್ಕದ್ದು ಅವಶ್ಯಕವೆಂಬುದಾಗಿ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿರತಕ್ಕ ಒಟ್ಟು ಪ್ರದೇಶದಲ್ಲಿ ಸುಮಾರು $13\frac{1}{3}$ ಲಕ್ಷ ಚ. ಮೈಲಿಗಳಷ್ಟು ಪ್ರದೇಶದಲ್ಲಿ ಕಾಡಿರುತ್ತದೆ ಎಂತ ಅಂಕೀಅಂಶಗಳಿಂದ ಗೊತ್ತಾಗುತ್ತದೆ. ಮುಖ್ಯವಾಗಿ ಉತ್ತರ ಕನ್ನಡ, ದಕ್ಷಿಣ ಕನ್ನಡ, ಮೈಸೂರು ಜಿಲ್ಲೆ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಹೆಚ್ಚಿಗೆ ಕಾಡುಪ್ರದೇಶವಿರುತ್ತದೆ. ಹಾಗೇ ಬೀದಾರ್ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಬಹಳ ಕಡಿಮೆ ಕಾಡು ಪ್ರದೇಶವಿದೆ. ಈ ದಿವಸ ಈ ಮಸೂದೆ ಸಭೆಯ ಮುಂದೆ ಬಂದಿರತಕ್ಕ ಕಾರಣಗಳಲ್ಲಿ ಒಂದು ಸಾಮಾನ್ಯ ಕಾರಣ ಯಾವುದೆಂದರೆ ಈ ಹೊಸ ರಾಜ್ಯಕ್ಕೆ ಬೇರೆ ಬೇರೆ ಪ್ರದೇಶಗಳಿಂದ ಬಂದಿರತಕ್ಕ ಭಾಗಗಳಲ್ಲಿ ಬೇರೆ ಬೇರೆ ರೀತಿಯ ಕಾನೂನುಗಳಿದ್ದುದರಿಂದ ಈಗ ಅವುಗಳನ್ನೆಲ್ಲ ಒಂದು ಸಮನ್ವಯಗೊಳಿಸುವುದಕ್ಕೆ ಒಂದು ಏಕರೂಪವಾದ ಅರಣ್ಯಕ್ಕೆ ಸಂಬಂಧಪಟ್ಟ ಮಸೂದೆಯನ್ನು ಜಾರಿಗೆ ತರಬೇಕೆಂಬ ಉದ್ದೇಶದಿಂದ ಈಗ ಇದನ್ನು ಮಂಡಿಸಿದ್ದಾರೆ. ಈಗಾಗಲೇ ಮಾನ್ಯ ಸಚಿವರು ಹೇಳಿದ ಹಾಗೆ ಗಂಧದ ಮರಗಳು ಎಲ್ಲಿಯೇ ಬೆಳೆದಿರಲಿ, ಯಾರ ಹಕ್ಕಿನ ಜಮೀನಿನಲ್ಲೇ ಬೆಳೆದಿರಲಿ—ಅವುಗಳ ಮೇಲೆಲ್ಲಾ ಸರ್ಕಾರಕ್ಕೆ ಪೂರ್ಣ ಅಧಿಕಾರವಿತ್ತು. ಆದರೆ ಈಗ ಈ ವಿಚಾರದಲ್ಲಿ ಸ್ವಲ್ಪ ತಿದ್ದುಪಡಿ ಮಾಡಿ ಇದನ್ನು ಬದಲಾವಣೆ ಮಾಡಿದಂತೆ ಕಾಣುತ್ತಿದೆ. ಈ ಹಿಂದೆ ಖಾಸಗಿಯವರ ಜಮೀನಿನಲ್ಲಿ ಬೆಳೆದಿದ್ದ ಗಂಧದ ಮರಗಳ ಬಗ್ಗೆ ಅವರಿಗೆ ಇಂತಿಷ್ಟು ರಾಯಲ್ಟಿ ಎಂತ ಮಾತ್ರ ಕೊಡಲಾಗುತ್ತಿತ್ತು. ಆದರೆ ಇನ್ನು ಮುಂದಕ್ಕೆ ಈ ಗಂಧದ ಮರಗಳ ಮಾರಾಟದಿಂದ ಬರತಕ್ಕ ಹಣದಲ್ಲೂ ಸ್ವಲ್ಪ ಭಾಗ ಕೊಡುತ್ತೇವೆಂದು ಹೇಳಲಾಗಿದೆ. ಆಶ್ವಾಸನ ಕೊಟ್ಟಿದ್ದಾರೆ. ಇದೊಂದು ದೊಡ್ಡ ಸುಧಾರಣೆ ಎಂತಲೇ ಹೇಳಬಹುದು.

ಶ್ರೀ ಬಿ. ರಾಜಯ್ಯ.—ಈ ಹಿಂದೆ ಹಳೇ ಮೈಸೂರು ಪ್ರದೇಶದಲ್ಲಿ ಈ ಗಂಧದಮರಗಳು ಎಲ್ಲೇ ಬೆಳೆದಿರಲಿ- ರೈತನ ಹಕ್ಕಿನ ಜಮೀನಿನಲ್ಲಿ ಬೆಳೆದಿದ್ದರೂ ಆದರ ಪೂರ್ಣ ಅಧಿಕಾರ ಸರ್ಕಾರಕ್ಕಿತ್ತು. ಖಾಸಗೀ ಜಮೀನಿನಲ್ಲಿದ್ದ ಗಂಧದ ಮರಗಳಿಗೆ ಒಂದು ನಾಮಿನಲ್ ರಾಯಲ್ಟಿಯನ್ನು ಮಾತ್ರ ಕೊಡಲಾಗುತ್ತಿತ್ತು.

ಶ್ರೀ ಎಸ್. ಗೋಪಾಲಗೌಡ.—ಕಾಡು, ಈ ದಿವಸ ನಾನು ಮೊದಲೇ ಹೇಳಿದ ಹಾಗೆ, ಅನೇಕ ಕಾರಣಗಳಿಂದ ಅಂದರೆ ಕಡಿದುಹಾಕುವುದರಿಂದ ಮತ್ತು ಕಾಡಿಗೆ ಬೆಂಕಿ ಬೀಳುವುದರಿಂದ ಇದು ನಾಶವಾಗುತ್ತಿದೆ. ಕಾಡು ಹೀಗೆ ದಿನದಿನಕ್ಕೂ ಕಡಮೆಯಾಗುತ್ತಾ ಬರುತ್ತಿದೆ. ನಮ್ಮ ಹಳೇ ಮೈಸೂರಿನಲ್ಲಂತೂ ಇದು ವಿಪರೀತವಾಗಿದೆ. ಹೊಸ ಮೈಸೂರು ಪ್ರದೇಶದಲ್ಲಿ ಹೇಗಿದೆಯೋ ಗೊತ್ತಿಲ್ಲ. ಆದ ಕಾರಣ ಈ ವಿಚಾರಕ್ಕೆ ಮಂತ್ರಿಗಳು ಹೆಚ್ಚಿನ ಗಮನ ಕೊಡಬೇಕಾಗಿದೆ.

ಈ ದಿವಸ ಬಹಳ ಜನರು ವ್ಯವಸಾಯಕ್ಕೆ ಭೂಮಿಯನ್ನು ಕೇಳುತ್ತಿದ್ದಾರೆ. ನಮ್ಮ ಮಲೆನಾಡು ಸರಹದ್ದಿನಲ್ಲಿ ಮೈನರ್ ಫಾರೆಸ್ಟ್ ಎಂತ ಇದ್ದ ಬಹಳ ಪ್ರದೇಶವನ್ನು ಸ್ಟೇಟ್ ಫಾರೆಸ್ಟ್ ಬಾಬಿಗೆ ಸೇರಿಸಿಕೊಂಡಿದ್ದಾರೆ. ಈ ದಿವಸ ಈ ಮೈನರ್ ಫಾರೆಸ್ಟ್ ಬಾಬಿಗೆ ಸೇರಿದ್ದ ಭೂಮಿಯಲ್ಲಿ ಬಹಳ ಬಾಗ ತೋಟಮಾಡುವುದಕ್ಕೆ ಬಹಳ ಲಾಯಖ್ಖಾದ ಜಮೀನಾಗಿದೆ. ಇಂಥಾ ಫಲವತ್ತಾದ ಕೆಲವು ಜಮೀನು ಸ್ಟೇಟ್ ಫಾರೆಸ್ಟಿನಲ್ಲೂ ಇರುತ್ತೆ. ಈ ದಿವಸ ಆ ಶರಾವತಿ ಪ್ರಾಜೆಕ್ಟ್ ನಿರ್ಮಾಣದ ದೆಸೆಯಿಂದ ಅಲ್ಲಿ ಅನೇಕರ ಆಸ್ತಿ ನೀರ್ಮುಳುಗಡೆ ಆಯಿತು. ಅಂಥ ಜನಗಳಿಗೆ ಸ್ಟೇಟ್ ಫಾರೆಸ್ಟಿನಿಂದ ಜಮೀನನ್ನು ಬಿಡಿಸಿ ಕೊಡಬೇಕೆಂದು ನಾವು ಸರ್ಕಾರಕ್ಕೆ ಒತ್ತಾಯ ಮಾಡಿ ಕೇಳುತ್ತಿದ್ದೇವೆ. ಕೆಲವರಿಗೆ ಕೊಟ್ಟಿದ್ದಾರೆ. ಇನ್ನು ಕೆಲವರಿಗೆ ಕೊಡಬೇಕಾಗಿದೆ. ಆದರೆ ಮೈನರ್ ಫಾರೆಸ್ಟ್ ಬಾಬಿಗೆ ಸೇರಿದ ಜಮೀನಿನಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಜಮೀನು ಬಹಳವಾಗಿದೆ. ಈಗ ಹೊಸದಾಗಿ ವ್ಯವಸಾಯದ ಬಾಬಿಗಾಗಿ ಈ ಫಾರೆಸ್ಟಿನಿಂದ ರಿಜರ್ವ್ ಮಾಡಿಸತಕ್ಕ ಭೂಮಿಯನ್ನು ಆಫೀಸಿನಲ್ಲಿರತಕ್ಕ ಅಧಿಕಾರಿಗಳು ಬೇಗ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ. ಸರ್ಕಾರದವರು ಈ ವಿಚಾರವನ್ನು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ಕಾರವಾರದಲ್ಲಿ ಈ ಹಿಂದೆ ಒಂದು ದೊಡ್ಡ ಚಳುವಳಿ ರೂಪವನ್ನೇ ತಾಳಿತ್ತು ಈ ವಿಚಾರ. ಒಂದಾನೊಂದು ಕಾಲದಲ್ಲಿ ಮಲೆನಾಡಿನಲ್ಲಿ ಕಾರಣಾಂತರಗಳಿಂದ ಹೆಚ್ಚಿನ ಜನಸಂಪತ್ತಿನಿಂದ ಕೂಡಿರಲಿಲ್ಲ. ಅನೇಕ ಗ್ರಾಮ ಸರಹದ್ದಿನ ಜಮೀನು ಪಾಳು ಬಿದ್ದಿತ್ತು. ಅಂಥ ಸಾವಿರಾರು ಎಕರೆ ಜಮೀನನ್ನು ಸರ್ಕಾರದವರು ತಮ್ಮ ಕಡೆಗೆ ವಹಿಸಿಕೊಂಡಿದ್ದಾರೆ. ಈ ಹಿಂದೆ ಮಲೆನಾಡು ಪ್ರದೇಶದಲ್ಲಿ ಶಿವಪ್ಪ ನಾಯಕನ ಒಂದು ದೊಡ್ಡ ಪಾಳೆಯ ಪಟ್ಟ ಇತ್ತು. ಅದು ಹೋದಮೇಲೆ ಜನರ ಹಿಡುವಳಿಯಲ್ಲಿದ್ದ ಅನೇಕ ಜಮೀನನ್ನು ಯಾವಾಗ ಜನಸಂಖ್ಯೆ ಕಡಿಮೆ ಆಯಿತೋ ಆಗ ಸರ್ಕಾರದವರ್ರು

ಅದನ್ನೆಲ್ಲಾ ಸೇರಿಸಿಕೊಂಡು ಬಿಟ್ಟರು. ಇದಕ್ಕೆ ಬೇಕಾದಷ್ಟು ಆಧಾರಗಳಿವೆ. ಇದೇ ರೀತಿ ಆ ಕೆಳದಿ ರಾಜ್ಯದಲ್ಲೂ ಕಾರವಾರ ಜಿಲ್ಲೆಯೂ ಆಗಿದೆ. ಆದರೆ ಇತ್ತೀಚೆಗೆ ಮಲೆನಾಡಿನಲ್ಲಿ ಜನಸಂಖ್ಯೆ ಹೆಚ್ಚುತ್ತಾ ಬಂದುದರಿಂದ ಈಗ ಜನಗಳಿಗೆ ಜಮೀನಿನ ಆವಶ್ಯಕತೆ ಜಾಸ್ತಿಯಾಗಿರುತ್ತದೆ. ಫಲವತ್ತಾದ ಕಾಡು ಜಮೀನು ಎಲ್ಲೆಲ್ಲಿವೆಯೋ ಅಲ್ಲಿ ವ್ಯವಸಾಯ ಮಾಡುವುದಕ್ಕೂ, ಅಡಕೆ ತೋಟಗಳನ್ನು ಬೆಳೆಸುವುದಕ್ಕೂ ಹಣ್ಣಿನ ತೋಟಗಳನ್ನು, ಬೆಳೆಸುವುದಕ್ಕೂ ಬಳಸಬಹುದು. ಇಂಥ ಫಲವತ್ತಾದ ಭೂಮಿಯನ್ನೆಲ್ಲಾ ಈ ದಿವಸ ಆ ಮೈನರ್ ಫಾರೆಸ್ಟಿಗೆ ಸೇರಿಸಿಕೊಂಡಿರುತ್ತಾರೆ. ಈ ಹಿಂದೆ ಹೀಗೆ ಸೇರಿಸಿಕೊಂಡಿರತಕ್ಕ ಜಮೀನನ್ನೆಲ್ಲ ಈಗ ಬಿಟ್ಟುಕೊಟ್ಟು ಅನಂತರ ಏನು ಭೂಮಿ ಉಳಿಯುತ್ತದೋ ಅಷ್ಟನ್ನು ಮಾತ್ರ ಅವರು ಕಾಡಿಗೆ ರಿಜರ್ವ್ ಮಾಡಿಕೊಳ್ಳಲಿ ಅಂತ ಹೇಳುತ್ತೇನೆ. ಈಗ ನಮ್ಮ ಫಾರೆಸ್ಟ್ ಇಲಾಖೆಯವರು ಕೆಲವು ಕಡೆ ಯೂಕ್ಲಿಪ್ಟಸ್ ಮರಗಳನ್ನೂ ಮತ್ತು ತೇಗದ ಮರಗಳನ್ನೂ ಬೆಳಸಿ ಪ್ಲಾಂಟೇಷನ್‌ಗಳನ್ನು ಮಾಡಿದ್ದಾರೆ. ಇಂಥ ಮರಗಳಿರುವುದರಿಂದ ಈ ದಿವಸ ನಮ್ಮ ಸರ್ಕಾರಕ್ಕೆ ಈ ಕಾಡಿನಿಂದ ಸುಮಾರು 8 ಕೋಟಿ ರೂ. ಗಳ ವರಮಾನ ಬರುತ್ತಿದೆಯೆಂಬುದಾಗಿ ಮಾನ್ಯ ಮಂತ್ರಿಗಳು ಹೇಳಿದರು. ಅಂದರೆ ಈ ವರಮಾನವು ತೇಗ, ಗಂಧ, ಚೌಬೀನೆ, ಬಿದಿರು ಇತ್ಯಾದಿ ಮರಗಳನ್ನು ನಮ್ಮ ಫಾರೆಸ್ಟ್ ಇಲಾಖೆಯ ಡಿಪೋಗಳ ಮೂಲಕ ಮಾರಾಟ ಮಾಡಿ ಅಷ್ಟು ವರಮಾನ ಪಡೆಯುತ್ತಿದ್ದಾರೆಂತ ಹೇಳಿದರು. ಆದರೆ ಈ ಆದಾಯವನ್ನು ಇನ್ನೂ ಹೆಚ್ಚಿಸಿಕೊಳ್ಳುವುದಕ್ಕೆ ಅವಕಾಶವಿದೆ. ಆದರೆ ಇಲ್ಲಿಯವರೆಗೂ ನಮ್ಮ ರಾಜ್ಯದಲ್ಲಿ ಬೆಟ್ಟ ಗುಡ್ಡಗಳ ಮೇಲೆ ಶೀಘ್ರವಾಗಿ ಬೆಳೆಯುವಂಥ ಮತ್ತು ಕಟ್ಟಿಗೆಗಾಗಿ ಉಪಯೋಗಿಸುವಂಥಾ ಮರಗಳನ್ನು ಬೆಳೆಸತಕ್ಕ ಕಾರ್ಯಕ್ರಮ ಯಾವುದನ್ನೂ ಹಾಕಿಕೊಂಡಿಲ್ಲ. ಎಲ್ಲೋ ಈ ಮೈದಾನ ಪ್ರದೇಶದಲ್ಲಿ ಒಂದೆರಡು ಕಡೆಗಳಲ್ಲಿ ಮಾತ್ರ ಸೌದೆಗೆ ಬಳೆಸುವ ಕ್ಯಾಸರೀನ ಮರಗಳನ್ನು ಮಾತ್ರ ಬೆಳೆಸುತ್ತಿದ್ದಾರೆ. ಇನ್ನು ಕಾಡಿನಲ್ಲಿ ಎಲ್ಲಿ ಮರಗಳನ್ನು ಕತ್ತರಿಸುತ್ತಾರೋ ಅಲ್ಲಿ ಹೊಸದಾಗಿ ಮರಗಳನ್ನು ಬೆಳೆಸುವ ಪ್ರಯತ್ನವೂ ಕೂಡ ಸರಿಯಾಗಿ ಆಗುತ್ತಿಲ್ಲ. ಇನ್ನು ಕಾಡಿನಲ್ಲಿ ಉಪಯುಕ್ತ ಮರಗಳನ್ನೂ ಹಾಗೂ ಸೌದೆಗೂ ಇದ್ದಲಿಗೂ ಬರುವ ಮರಗಳೇನಿವೆ ಅವುಗಳನ್ನು ಬೆಳೆಸಲು ಹೆಚ್ಚು ಮುತವರ್ಜಿ ವಹಿಸಬೇಕು. ಕಡಿದ ಜಾಗದಲ್ಲಿ ಹೊಸ ಮರಗಳನ್ನು ಬೆಳಸಲು ಅಷ್ಟು ಬೇಗ ಅವಕಾಶವಾಗುವುದಿಲ್ಲ.

ಮೈಸೂರು ಸಂಸ್ಥಾನವು ಭಾರತದಲ್ಲಿ ಸಾಕಷ್ಟು ಮಟ್ಟಿಗೆ ಕಾಡನ್ನು ಹೊಂದಿರತಕ್ಕ ಒಂದು ಪ್ರಾಚೀನ ಸಂಸ್ಥಾನವಾಗಿದೆ. ಇವೊತ್ತು ಕಾಡಿಗೆ ಸಂಬಂಧಪಟ್ಟ ಹಾಗೆ ರಿಸರ್ಚ್ ಮಾಡುವುದಕ್ಕೆ ಬೇಕಾದ ಅನುಕೂಲತೆಗಳು ನಮ್ಮ ದೇಶದಲ್ಲಿವೆ. ನಮ್ಮ ಸಂಸ್ಥಾನದಲ್ಲಿ ಹೆಚ್ಚು ಸಂಶೋಧನೆಯನ್ನು ನಡೆಸಲು ವ್ಯವಸಾಯದ ಕಾಲೇಜು ಮುಂತಾದ ಕೆಲವು ಕಾಲೇಜುಗಳಿವೆ. ಆದರೆ ಅರಣ್ಯ ಶಿಕ್ಷಣಕ್ಕಾಗಿ ಒಂದು ಕಾಲೇಜನ್ನು ನಮ್ಮ ಸಂಸ್ಥಾನದಲ್ಲಿ ತೆಗೆದಿಲ್ಲ. ನಮ್ಮ ದೇಶದಿಂದ ಡೆಹರಾಡೂನಿಗೆ ಹೋಗಿ ಅಲ್ಲಿ ಫಾರೆಸ್ಟ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿಕೊಂಡು ಬಂದಿದ್ದಾರೆ. ಆ ರೀತಿ ಫಾರೆಸ್ಟ್ ಇಲಾಖೆಯಿಂದ ಹೆಚ್ಚಿನ ವ್ಯಾಸಂಗಕ್ಕೆ ಹೋಗತಕ್ಕವರು ಬಹಳ ದೊಡ್ಡ ದೊಡ್ಡ ಜನ. ಅದೇ ಒಂದು ವರ್ಗ ಇದೆ. ಸಾಮಾನ್ಯವಾಗಿ ನಾನು ಹೇಳುವುದೇನೆಂದರೆ ಮರಗಳನ್ನು ನೆಡಿಸುವುದು, ಬೆಳಸುವುದು, ಮತ್ತು ಅವುಗಳನ್ನು ಉಪಯೋಗಿಸುವುದು—ಈ ಎಲ್ಲಾ ವಿಷಯಗಳನ್ನೂ ಈಗ ಸಾರ್ವತ್ರಿಕವಾಗಿ ಹೇಳಬೇಕಾದ ಅವಶ್ಯಕತೆ ಬಂದಿದೆ. ಈ ವನ ಸಂಪತ್ತಿನ ವಿಷಯದಲ್ಲಿ ಈಗಾಗಲೇ ಅನೇಕ ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ಹೇಳಿದ್ದಾರೆ. ಈ ವನ ಸಂಪತ್ತಿನ ವನಮಹೋತ್ಸವವನ್ನು ಅನೇಕ ವರ್ಷಗಳಿಂದ ನಮ್ಮ ದೇಶದಲ್ಲಿ ನಡೆಸಿಕೊಂಡು ಬಂದಿದ್ದಾರೆ. ಇದಕ್ಕಾಗಿ ಅನೇಕ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಸಾಮಾನ್ಯವಾಗಿ ರೈತರಿಗೆ ಮತ್ತು ಎಲ್ಲಾ ಜನಗಳಿಗೂ ಕಾಡಿನ ಬಗ್ಗೆ ಒಂದು ಒಳ್ಳೆಯ ಅಭಿಪ್ರಾಯ ಇರುವ ಹಾಗೆ ಅದನ್ನು ಬೆಳೆಸುವ ಮತ್ತು ಉಪಯೋಗಿಸುವ ವಿಷಯದಲ್ಲಿ ತಿಳುವಳಿಕೆ ಇರುವ ಹಾಗೆ ಮಾಡಬೇಕಾದರೆ ಸಾರ್ವತ್ರಿಕವಾಗಿ ಒಂದು ವಿಷಯವನ್ನು ಹೇಳಬೇಕಾಗುತ್ತದೆ. ಅವೇನೆಂದರೆ ನಮ್ಮ ರಾಜ್ಯದಲ್ಲಿ ಪದವಿಯ ಮಟ್ಟದಲ್ಲೋ ಅಥವಾ ಡಿಪ್ಲೊಮಾ ಮಟ್ಟದಲ್ಲೋ ಶಿಕ್ಷಣ ನೀಡುವ ಕಾಲೇಜನ್ನೂ ಪ್ರಾರಂಭ ಮಾಡಬೇಕು. ನಮ್ಮಲ್ಲಿ ಕಾಡು ಹಾಳಾಗುವುದಕ್ಕೆ ಕಾರಣವೇನೆಂದರೆ ಕಂಟ್ರಾಕ್ಟರುಗಳಿಗೆ ಕಾಡನ್ನು ಕಡಿಯುವುದಕ್ಕೆ ಕೊಡುತ್ತಾರೆ. ಅವರು ಕಾಡನ್ನು ಕಡಿದು ಇದ್ದಿಲನ್ನು ಸುಡುತ್ತಾರೆ. ಮತ್ತು ಭದ್ರಾವತಿ ಮುಂತಾದ ದೊಡ್ಡ ದೊಡ್ಡ ಕಾರ್ಖಾನೆಗಳಿಗೆ ಸೌದೆಯು ಸರಬರಾಯು ಮಾಡಲು ಸಹಸ್ರಾರು ಚದುರ ಮೈಲಿಗಳಷ್ಟು ಕಾಡನ್ನು ಕಡಿದಿದ್ದಾರೆ. ಇದ್ದಿಲಿನ ಬಳಕೆಯ ಬಗ್ಗೆ ನಾವು ಹೆಚ್ಚು ಮುತುವರ್ಜಿವಹಿಸಬೇಕಾಗುತ್ತದೆ. ಮತ್ತು ಅದಷ್ಟು ಮಟ್ಟಿಗೆ ಅದರಲ್ಲಿ ಮಿತವ್ಯಯವನ್ನೂ ಸಾಧಿಸಬೇಕಾಗುತ್ತದೆ. ಈ ಇದ್ದಿಲನ್ನು ಉಪಯೋಗಿಸುವುದಕ್ಕೆ ಬದಲಾಗಿ ಬೇರೆ ಆಧುನಿಕ ವಿಧಾನಗಳನ್ನು ನಾವು ಹುಡುಕಬೇಕಾಗುತ್ತದೆ. ಒಂದು ಮರ ಬೆಳೆಯಬೇಕಾದರೆ ನೂರಾರು ವರ್ಷಗಳನ್ನು ತೆಗೆದುಕೊಳ್ಳುತ್ತದೆ. ನಮ್ಮ ಮಲೆನಾಡಿನಲ್ಲಂತೂ ಕಾಡನ್ನು ವಿಶೇಷವಾಗಿ ಕಡಿದು ಇದ್ದಿಲನ್ನು ಸುಡುತ್ತಿದ್ದಾರೆ. ಅಲ್ಲಿಗೆ ಬಯಲು ಸೀಮೆಯವರು ಹೋಗುವುದಕ್ಕೆ ಹೆದರುತ್ತಿದ್ದರು. ಏತಕ್ಕೆಂದರೆ ಹುಲಿ, ಕರಡಿ ಮುಂತಾದ ಮೃಗಗಳಿರುತ್ತವೆ. ಅವು ನಮ್ಮ ಮೇಲೆ ಎಲ್ಲಿ ಬೀಳುತ್ತವೆಯೋ ಎನ್ನುವ ಹೆದರಿಕೆ ಜನಗಳಿಗೆ ಇತ್ತು. ಹಿಂದೆ ಕಾಡೂ ಸಹ ಅಷ್ಟೊಂದು ದಟ್ಟವಾಗಿತ್ತು. ಇವೊತ್ತು ಅದೆಲ್ಲವೂ ಬಯಲಾಗಿದೆ. ಈ ರೀತಿ ಆಗಿರುವುದರಿಂದ ಆ ಪ್ರದೇಶದಲ್ಲಿ ಭೂಮಿಯ ಸಾರವೆಲ್ಲವೂ ಎರೋಷನ್ ಉಂಟಾಗಿ ಆದರಿಂದ ನೂರಾರು ದುಷ್ಪರಿಣಾಮಗಳುಂಟಾಗುತ್ತವೆ.

ಆ ಮೇಲೆ ಕಾಡನ್ನು ಸಂರಕ್ಷಣೆ ಮಾಡುವ ವಿಷಯದಲ್ಲಿ ಕಾನೂನಿನಲ್ಲಿ ಏನು ಕೆಲವು ನಿಬಂಧನೆಗಳನ್ನು ಹಾಕಿದ್ದಾರೋ ಅವುಗಳನ್ನು ಆದಷ್ಟು ಬೇಗ ಪರಿಶೀಲನೆ ಮಾಡಿ ಕಾಡನ್ನು ಹೆಚ್ಚು ರಕ್ಷಣೆ ಮಾಡುವುದಕ್ಕೆ ಅನುಕೂಲವಾಗುವಂತೆ ಅವುಗಳನ್ನು ಅಳವಡಿಸಿಕೊಳ್ಳುವುದು ಒಳ್ಳೆಯದು ಎಂದು ನಾನು ಹೇಳುತ್ತೇನೆ.

ಧಾರವಾಡದ ಹತ್ತಿರ ಫಾರೆಸ್ಟ್ ಎಂದು ಇದೆ. ನಾನು ಬಹಳ ದಿವಸಗಳಿಂದ ಅದನ್ನು ನೋಡುತ್ತಿದ್ದೇನೆ.

(ಶ್ರೀ ಎಸ್ ಗೋಪಾಲ ಗೌಡ)

ಅದು ಬರೀ ಹೆಸರಿಗೆ ಮಾತ್ರ ಫಾರೆಸ್ಟ್ ಆಗಿದೆಯೇ ಹೊರತು ಅಲ್ಲಿ ಯಾವ ಮರಗಳೂ ಇಲ್ಲ. ಆದರೂ ಸಹ ಅಲ್ಲಿನ ಜನರು ಅದನ್ನು ಫಾರೆಸ್ಟ್ ಎಂದು ಕರೆಯುತ್ತಾರೆ. ಬಹಳ ದಿವಸಗಳಿಂದ ಅದನ್ನು ವ್ಯವಸಾಯಕ್ಕೆ ಕೊಡಿ ಎಂದು ಜನಗಳು ಕೇಳುತ್ತಿದ್ದಾರೆ. ಆದರೆ ಅದನ್ನು ಸರ್ಕಾರದವರು ಜನಗಳಿಗೆ ಕೊಟ್ಟಿಲ್ಲ. ನಾವು ಕಾಡು ಎಂದು ಕರೆದು ಅದನ್ನು ಇಟ್ಟುಕೊಳ್ಳಬೇಕಾದರೆ ನಿಜವಾಗಿ ಕಾಡನ್ನು ಬೆಳೆಸತಕ್ಕ ಮತ್ತು ಅದನ್ನು ಸಂರಕ್ಷಣೆಮಾಡತಕ್ಕ ಕೆಲಸಗಳು ನಡೆಯಬೇಕು. ಮತ್ತು ಅದರಲ್ಲಿ ಬೆಲೆಯುಳ್ಳ ಉತ್ತಮವಾದ ಮರಗಳನ್ನು ನೆಟ್ಟು ಪ್ಲಾಂಟೇಷನ್ ಮಾಡುವುದು ಮುಖ್ಯ. ಸಣ್ಣ ಸಣ್ಣ ಕುರುಚಲು ಗಿಡಗಳನ್ನು ಇಟ್ಟುಕೊಂಡು ಅದು ಒಂದು ಕಾಡು ಎಂದು ಹೇಳಿದರೆ ಅದು ಚೆನ್ನಾಗಿ ಕಾಣುವುದಿಲ್ಲ. ಕಾಡನ್ನು ಬೆಳೆಸುವುದಕ್ಕೆ ಸರ್ಕಾರದವರು ಸಾಕಷ್ಟು ಪ್ರಯತ್ನ ಮಾಡಿಲ್ಲ. ಮಾನ್ಯ ಅರಣ್ಯ ಶಾಖಾ ಮಂತ್ರಿಗಳು ನಮ್ಮ ಮಲೆನಾಡು ಪ್ರದೇಶಕ್ಕೆ ಬಂದರೆ ಅವರಿಗೆ ನಾನು ತೋರಿಸುತ್ತೇನೆ. ನಮ್ಮ ಅಜ್ಜ ಮುತ್ತಜ್ಜನ ಕಾಲದಲ್ಲಿ ಕಾಡು ಎಷ್ಟಿತ್ತೋ ಅಷ್ಟು ಕಾಡು ಈಗ ಇಲ್ಲ. ಹಿಂದೆ ಇದ್ದಂತಹ ಕಾಡನ್ನು 20–30 ಮೈಲಿಯ ವರೆಗೂ ಕಾಡನ್ನು ಕಡಿದು ಹಾಕಿದ್ದಾರೆಯೇ ಹೊರತು ಆ ಪ್ರದೇಶದಲ್ಲಿ ಕಾಡನ್ನು ಬೆಳೆಸುವುದಕ್ಕೆ ಯಾವ ಪ್ರಯತ್ನವನ್ನೂ ಮಾಡಿಲ್ಲ. ನಮ್ಮ ಭಾಗದಲ್ಲಿ ಬಹಳ ಮೈಲಿಗಳವರೆಗೆ ಎಂದರೆ ಅರಸಾಳು ಗಾಜಾಳಿನ ವರೆಗೂ ಕಾಡನ್ನು ಕಡಿದು ಹಾಕಿದ್ದಾರೆ. ಆ ಪ್ರದೇಶದಲ್ಲಿ ಯಾವ ತರಹ ಮರಗಳನ್ನು ನೆಡುವುದಕ್ಕಾಗಲಿ, ಪ್ಲಾಂಟೇಷನ್ ಮಾಡುವ ಕೆಲಸವಾಗಲಿ ಯಾವುದೂ ನಡೆದಿಲ್ಲ. ಆದ್ದರಿಂದ ಫಾರೆಸ್ಟ್ ಇಲಾಖೆಯವರು ಆ ಕಡೆ ಹೆಚ್ಚುಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಪ್ರಾರ್ಥಿಸುತ್ತೇನೆ. ಟಿಂಬರ್ಸ್ ವಿಷಯದಲ್ಲಿ ಮಾನ್ಯಮಂತ್ರಿಗಳು ಏನೂ ಹೇಳಲಿಲ್ಲ. ಮತ್ತು ಸಂಡೂರಿನ ಗಂಧದ ಮರದ ಕೇಸು ಏನಾಯಿತು ಎಂಬುದನ್ನು ಮಾನ್ಯ ಮಂತ್ರಿಗಳು ನಮಗೆ ಹೇಳಬೇಕು.

MR. SPEAKER.—Members on the Select Committee will have ample opportunities to contribute all their ideas and suggestions, and I find that the Hon'ble Member's name is proposed. He will kindly bear this in mind.

ಶ್ರೀ ಬಿ. ರಾಚಯ್ಯ—ಫಾರೆಸ್ಟ್ ಇಲಾಖೆಗೆ ಸಂಬಂಧಪಟ್ಟ ಹಾಗೆ ಇದುವರೆಗೂ ನಮ್ಮ ರಾಜ್ಯದ 5 ಭಾಗಗಳಲ್ಲಿಯೂ 5 ತರಹ ಕಾನೂನುಗಳಿದ್ದುವು. ಅವುಗಳನ್ನು ಏಕರೂಪಕ್ಕೆ ತರುವುದಕ್ಕೋಸ್ಕರ ಈಗ ಈ ಮಸೂದೆಯನ್ನು ಈ ಸಭೆಯಮುಂದೆ ತಂದಿದ್ದೇವೆ. ಈ ಮಸೂದೆ ಜಾರಿಗೆ ಬಂದ ಮೇಲೆ ಅದರ ಪರಿಣಾಮ ಉತ್ತಮವಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಗಂಧದಮರಗಳನ್ನು ಕೂಡ ಹೆಚ್ಚಿಗೆ ಬೆಳೆಸುವ ಪ್ರಯತ್ನವನ್ನು ಸರ್ಕಾರದವರು ಮಾಡಿಲ್ಲ. ಇದು ನಮಗೆ ಡಾಲರ್ ಅನ್ನು ತಂದು ಕೊಡತಕ್ಕ ಮರವಾಗಿರುವುದರಿಂದ ಇದರ ಬಗ್ಗೆ ಹೆಚ್ಚು ಪ್ರಯತ್ನವನ್ನು ಮಾಡಬೇಕಾಗುತ್ತದೆ. ಇನ್ನೊಂದು ವ್ಯಸನಕರವಾದ ಸಂಗತಿ ಏನೆಂದರೆ ಕೆಲವು ಖಾಸಗೀ ಜನರು ಗಂಧದ ಎಣ್ಣೆಯನ್ನು ಮಾರುವುದನ್ನು ಪ್ರಾರಂಭ ಮಾಡಿದ್ದಾರೆ ನಮ್ಮ ದೇಶದಿಂದ ಬೇರೆ ಕಡೆಗೆ ರಾತ್ರಿಯೋ ರಾತ್ರಿ ಗಂಧದ ಮರಗಳನ್ನು ಕದ್ದು ಸಾಗಿಸುತ್ತಿದ್ದಾರೆ. ಹಿಂದೆ ನಮ್ಮ ಮೈಸೂರು ಸಂಸ್ಥಾನದಲ್ಲಿ ಮೈಸೂರು ಮತ್ತು ಶಿವಮೊಗ್ಗದಲ್ಲಿ ಗಂಧದ ಎಣ್ಣೆಯ ಕಾರ್ಖಾನೆಯ ಮನಾಪಲಿ ಇತ್ತು. ಈಗ ಇದಕ್ಕೆ ಮಾರ್ಕೆಟ್ಟಿನಲ್ಲಿ ಸ್ಪರ್ಧೆ ಉಂಟಾಗಿದೆಯೆಂದು ನಾನು ಕೇಳುತ್ತೇನೆ ಇದರ ಬಗ್ಗೆ ಒಂದು ನೀತಿಯನ್ನು ಅನುಸರಿಸಬೇಕು-ಗಂಧದ ಮರಗಳನ್ನು ಹೆಚ್ಚಿಗೆ ಬೆಳೆದು ಅದನ್ನು ರಕ್ಷಣೆ ಮಾಡುವ ಬಗ್ಗೆ ಸರ್ಕಾರದವರು ಹೆಚ್ಚು ನಿಗಾ ಕೊಡಬೇಕು. ಇತ್ತೀಚೆಗೆ ಖಾಸಗೀಯವರು ಮರಗಳನ್ನು ಬೆಳೆಸುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಆದರ ಜೊತೆಗೆ ಸರ್ಕಾರದವರು ಸಹ ಹೆಚ್ಚು ಪ್ರಯತ್ನವನ್ನು ಮಾಡಬೇಕಾಗುತ್ತದೆ.

4-00 P.M.

ಗ್ರಾಮಗಳಲ್ಲಿ ಇದುವರೆಗೂ ಏನಾಗಿದೆ ಎಂದರೆ ಗ್ರಾಮಕ್ಕೆ ಒಂದು ವನ ಅಂತ ಹೇಳಿ ಹಳೇ ಮೈಸೂರಿನಲ್ಲಿ ಇದ್ದ ಹಾಗೆ ಕಾಣಲಿಲ್ಲ. ಕೆಲವರು ಗೋಮಾಳ, ತೋಪು, ಸೊಪ್ಪಿನ ಬೆಟ್ಟ ಅಂತ ಬಿಟ್ಟಿದ್ದರು, ಬರ ಬರುತ್ತಾ ಯಾವ ಗ್ರಾಮದ್ದೇ ಆಗಲೀ ಅದು ಸರ್ಕಾರಕ್ಕೆ ಸೇರಿದ್ದು ಅಂತ ಅಭಿಪ್ರಾಯ ಬಂದಿದೆ. ಖಾಸಗೀಯವರಿಗೆ ಮರಗಳನ್ನು ಬೆಳೆಸುವುದಕ್ಕೆ ಪ್ರೋತ್ಸಾಹಿಸಬೇಕು. ಇವತ್ತು ಗೋಮಾಳಗಳನ್ನೆಲ್ಲಾ ಮಾನ್ಯ ರೆವಿನ್ಯೂ ಮಿನಿಸ್ಟರ್ ಹೇಳಿದರು. ಗೋಮಾಳ ಇಟ್ಟುಕೊಂಡು ದನ ಮೇಯಿಸುವ ಕಾಲ ಹೊರಟು ಹೋಯಿತು. ಅವರವರಿಗೆ ಬೇಕಾದ ಆಹಾರ ಪದಾರ್ಥ ಅವರೇ ಬೆಳೆಸಬೇಕು ಎಂದು ಒಂದು ದೃಷ್ಟಿಯಿಂದ ಆ ಮಾತು ಸರಿ. ಒಂದು ಗ್ರಾಮಕ್ಕೆ ಅರಣ್ಯ ಎಷ್ಟು ಇರಬೇಕು ಎಲ್ಲಿ ಇರಬೇಕು ಎನ್ನುವುದು ಈಗಿರತಕ್ಕ ಪ್ರಶ್ನೆ. ನಮ್ಮ ಕ್ಷೇತ್ರದಲ್ಲಿ ಎ. ಇ. ಎಸ್. ಇವೆ. ಒಂದು ಕಡೆ ಆ ಅಧಿಕಾರಿಗಳ ಒತ್ತಾಯದ ಮೇಲೆ ವನಮಹೋತ್ಸವಕ್ಕೆ ಹೋಗಿದ್ದೆ. ಸಸಿನೆಟ್ಟು ಮೀಟಿಂಗ್ ಮುಗಿದ ಕೂಡಲೇ ಅದನ್ನು ಕಿತ್ತು ಹಾಕಿದರು. ಏಕೆ ಕಿತ್ತುಹಾಕಿದಿರಿ ಎಂದರೆ ನಮ್ಮ ಗ್ರಾಮದಲ್ಲಿ ಇರುವುದು ಇಷ್ಟೇ ಖಾಲಿಜಾಗ, ಇದೇ ಸ್ಮಶಾನಕ್ಕೂ ಬೇಕು, ಜಾನುವಾರುಗಳಿಗೂ ಬೇಕು. ವನ ನೆಡುವುದಕ್ಕೆ ಅವಕಾಶವೆಲ್ಲಿ ಎಂದು ಕೇಳಿದರು. ಈ ವನ ಇಡೀ ಗ್ರಾಮದ ಜನತೆಗೆ ಸಂಬಂಧಪಟ್ಟದ್ದಾಗಿರಬೇಕು. ಆಯಾಯಾ ಪ್ರದೇಶದಲ್ಲಿ ಗ್ರಾಮದ ಬಳಿ ಮರಗಳನ್ನು ನೆಡುವ ಕಾರ್ಯಕ್ರಮ ಹಾಕಿಕೊಳ್ಳಬೇಕು. ಬೊಂಬಿಗೆ ಗುಟ್ಟ 60 ವರ್ಷಕ್ಕೆ ಬರುತ್ತದೆ ಎಂದು ಹೇಳುತ್ತಾ ಇದ್ದರು. ಈಗ 30 ವರ್ಷಕ್ಕೆ ಬರುತ್ತಾ ಇದೆ. ಅದು ಬಂದರೆ ಬೊಂಬಿನ ಗಿಡಗಳೆಲ್ಲಾ ಸತ್ತುಹೋಗುತ್ತವೆ. ಇದನ್ನು ಗಮನಿಸಿ ಹೊಸ ಗಿಡಗಳನ್ನು ಬೆಳೆಸಲು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರೊ ಗೊತ್ತಿಲ್ಲ. ಇವತ್ತು ಬೊಂಬುಗಳನ್ನು ಹೆಚ್ಚಾಗಿ ಬೆಳೆಯತಕ್ಕ ಪ್ರದೇಶ ಭದ್ರಾವತಿ. ಬೇರೆ ಕಡೆಗಳಲ್ಲೂ ಕೂಡ ಕಾಗದದ ಕಾರ್ಖಾನೆಯನ್ನು ಹಾಕಿದ್ದೇವೆ. ನಮ್ಮ ಮಲೆನಾಡಿನಲ್ಲಿ ಯಾವ ಕಾರ್ಖಾನೆಯನ್ನೂ ಹಾಕುತ್ತಾ ಇಲ್ಲ. ಸಾಮಾನ್ಯವಾಗಿ ಎಲ್ಲಿ

ಕಚ್ಚಾಸಾಮಾನು ಸಿಕ್ಕುತ್ತದೆ ಅಲ್ಲಿ ಕಾರ್ಖಾನೆಗಳನ್ನು ಹಾಕುವುದು ಮತ್ತು ಕಚ್ಚಾಸಾಮಾನು ಏನು ಬೇಕು ಅದನ್ನು ಬೆಳೆಸುವುದು ಬಹಳ ಮುಖ್ಯವಾದ ವಿಷಯ. ಏಕೆಂದರೆ ಕಾಡು, ದೇಶಕ್ಕೆ ಎಷ್ಟು ಪ್ರಾಮುಖ್ಯವೋ ಕೈಗಾರಿಕೆಗಳೂ ಅಷ್ಟೇ ಪ್ರಾಮುಖ್ಯ. ಕೈಗಾರಿಕೆ ಮತ್ತು ಬೇಸಾಯ ಇವೆರಡೂ ನಮ್ಮ ಕಾಡಿನ ಸಂಪತ್ತಿನ ಮತ್ತು ವನಸಂಪತ್ತಿನ ಮೇಲೆ ನಿಂತಿರುತ್ತದೆ. ಈ ಕಡೆಗೆ ಸರ್ಕಾರದವರು ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ಮನವಿಮಾಡಿಕೊಳ್ಳುತ್ತೇನೆ.

ನಮ್ಮ ನಾಡಿನಲ್ಲಿ ಸಂಪತ್ತು ಬಹಳವಾಗಿದೆ. ಕವಿಗಳು ಹೇಳುವ ಹಾಗೆ ಬೆಳ್ಳಿ, ಭಂಗಾರ, ಬೆಟ್ಟ, ಕಾಡು ಅಂತ ಖನಿಜಸಂಪತ್ತು ಅರಣ್ಯಸಂಪತ್ತು ಏನಿದೆ ಅದನ್ನು ರೂಢಿಸಿಕೊಂಡು ಜನತೆಗೆ ಉಪಯೋಗವಾಗುವ ರೀತಿಯಲ್ಲಿ ಮಾಡುವಂಥ ಸಾಹಸ, ಚೈತನ್ಯ ನಮಗೆ ಇವತ್ತು ಬರಬೇಕು. ಈಚೆಗೆ ಒಬ್ಬರು ಜಪಾನಿನವರು ಬಂದಿದ್ದರು. ಅವರು ನಮ್ಮ ಭೂಮಿ, ಕಾಡು, ನಮ್ಮ ಜನ ವಾಸಮಾಡತಕ್ಕ ಕ್ರಮ ಅವರ ಸ್ಥಿತಿಗತಿ, ಬಡತನ ನೋಡಿ ಬಹಳ ದುಃಖ ಪಟ್ಟರು. ಕೈ ಕಟ್ಟಿಕೊಂಡು ಕುಳಿತಿರುವಿರಲ್ಲಾ ನಿಮಗೇನೂ ತೋಚುವುದಿಲ್ಲವೇ? ಕೈಗಾರಿಕೆ ಮಾಡುವುದಕ್ಕೆ ಆಗುವುದಿಲ್ಲವೇ? ಇಷ್ಟೆಲ್ಲಾ ಸಂಪತ್ತು ಇದೆ. ಬೊಂಬು ಇದೆ. ಏಕೆ ಇಷ್ಟು ಬಡವರಾಗಿದ್ದೀರಿ ಎಂದು ದುಃಖಪಟ್ಟರು. ಅದು ವಸ್ತುಸ್ಥಿತಿ ನಿಜ. ಇವತ್ತು ನಮ್ಮಲ್ಲಿ ರಚನಾತ್ಮಕವಾದ ಸೃಷ್ಟಿ, ಉದ್ಯೋಗ, ಇತ್ಯಾದಿಗಳು ಇವೆ. ಅವನ್ನು ರೂಢಿಸಿಕೊಳ್ಳುವುದಕ್ಕೆ ನಮ್ಮ ಅರಣ್ಯ ಮಂತ್ರಿಗಳು ಹೆಚ್ಚು ಪ್ರಯತ್ನಮಾಡಬೇಕು. ನಿನ್ನೆ ಹೇಳುತ್ತಾ ಇದ್ದರು. ಪಾಪ ಏನು ಕಷ್ಟ ಗೊತ್ತಾಗಲಿಲ್ಲವೋ; ನನ್ನದು ಒಂದು ಅರಣ್ಯ ರೋದನವಾಗಿದೆ ಎಂದು ಅಂದರು. ನಿಜ ಬಹಳ ಜನರ ರೋಧನ ಅರಣ್ಯರೋಧನವಾಗಿದೆ. ಅಂದ ಮಾತ್ರಕ್ಕೆ ಧೃತಿಗೆಡಬೇಕಾದುದಿಲ್ಲ. ಮೇಲಿಂದ ಮೇಲೆ ಪ್ರಯತ್ನ ಮಾಡಬೇಕು. ಒಳ್ಳೆಯ ಕೆಲಸಮಾಡುವಾಗ ಅರಣ್ಯ ರೋಧನವಾಗಿ ಕಂಡರೂ ಧೃತಿಗೆಡದೆ ಕೆಲಸ ಮಾಡಬೇಕು ಎನ್ನುವುದು ನನ್ನ ಅಭಿಪ್ರಾಯ. ಅದೇ ರೀತಿ ನಮ್ಮ ಮುಖ್ಯ ಸ್ನೇಹಿತರಾದ ರಾಚಯ್ಯನವರು ಮಾಡುತ್ತಾರೆ ಎಂದು ತಿಳಿದುಕೊಂಡಿದ್ದೇನೆ. ಈ ಮಸೂದೆಯನ್ನು ತಂದಿರುವುದು ಸ್ವಾಗತಾರ್ಹವಾಗಿದೆ. ಈ ಸಂದರ್ಭದಲ್ಲಿ ಮುಖ್ಯವಾದ ಒಂದು ಮಾತನ್ನು ಕೊನೆಯದಾಗಿ ಹೇಳುತ್ತೇನೆ. ನಮ್ಮ ಅರಣ್ಯ ಅಧಿಕಾರಿಗಳ ದೃಷ್ಟಿ ಕೂಡ ಸ್ವಲ್ಪ ಬದಲಾವಣೆಯಾಗಬೇಕು. ಒಳ್ಳೆಯ ರೀತಿಯಲ್ಲಿ ಅವರು ಕೆಲಸ ನೆರವೇರಿಸಬೇಕಾಗುತ್ತದೆ. ಮಾಡಿಲ್ಲ ಎಂದು ಹೇಳುತ್ತಾ ಇಲ್ಲ. ಕೆಲವು ಎಲ್ಲಾ ಮಾಮೂಲು ದಾರಿ ಆಗಿರುತ್ತವೆ. ಅವನ್ನು ತುಳಿದು ತುಳಿದೂ ಅಭ್ಯಾಸವಾಗಿ ಅದೇ ದಾರಿಯಲ್ಲಿ ಹೋಗಬೇಕು. ಹಾಗೇ ರಿಪೋರ್ಟ್ ಹಾಕುವುದು ಹಾಗೇ ಕಾಪೌಂಡು ಮಾಡುವುದು ಹಾಗೇಕೇನುಹಾಕುವುದು ಹಾಗೇ ಫೈನ್ ಹಾಕುವುದು ಇದೆಲ್ಲಾ ಮಾಮೂಲಾಗಿದೆ. ಆ ದಾರಿಯನ್ನು ಬಿಟ್ಟು ಹೋಗುವುದಕ್ಕೆ ದೊಡ್ಡವರೂ ಕೂಡ ಇಷ್ಟಪಡುವುದಿಲ್ಲ, ಸಣ್ಣವರೇಕೆ ಇಷ್ಟಪಡುತ್ತಾರೆ? ಬಿಟ್ಟರೆ ಅಪಾಯವಾಗುತ್ತದೆ. ಆದ್ದರಿಂದ ಈ ಇಲಾಖೆಯಲ್ಲಿ, ಒಳ್ಳೆಯ ರೀತಿಯಲ್ಲಿ ಪರಿವರ್ತನೆಯಾಗಬೇಕು. ಇವರ ಮೇಲೆ ದೊಡ್ಡ ಜವಾಬ್ದಾರಿ ಇದೆ. ಕಾಡು ಇಲಾಖೆಯವರನ್ನು ಮರುಮಾತನಾಡಿಸುತ್ತಾರೆ ಸ್ವಾಮಿ ಅಂತ ಅನ್ನಬಹುದು. ಅವರು ಕಾಡಿನಲ್ಲಿಯೇ ಇರುತ್ತಾರೆ. ಕಾಡಿನ ರಕ್ಷಣೆಗಾಗಿ ಇರುತ್ತಾರೆ. ಅಲ್ಲೇ ಓಡಾಡುತ್ತಾ ಇರುತ್ತಾರೆ. ಅದು ಬೇರೆ ಮಾತು. ಅವರು ಇವತ್ತು ವರ್ಷಕ್ಕೆ 8 ಕೋಟಿ ರೂಪಾಯಿ ಕೊಡುತ್ತಾರೆ. ಸಾಮಾನ್ಯ ಜನತೆ ಕಾಡು ಸಂಪತ್ತು ಎಂದರೆ ಮರಮುಟ್ಟು ಎಂದು ತಿಳಿದುಕೊಳ್ಳುತ್ತಾರೆ. ಬೇಕಾದಷ್ಟು ಸಂಪತ್ತು ಇದೆ. ಹಿಂದೆ ರಾಮರಾಜ ನಾಡರ್ ಅವರು ಹುಣಸೇಮರ ಕಡಿಯಬೇಡಿ ಎಂದು ಹೇಳಿದ್ದರು. ಬಹಳ ವರ್ಷಗಳವರೆಗೂ ಬಾಳುತ್ತದೆ. 50 ಲಕ್ಷ ರೂಪಾಯಿಗಳವರೆಗೂ ವರಮಾನ ಅದರಿಂದ ಬರುತ್ತದೆ. ಒಂದು ಹುಣಸೇಮರ ಕಡಿದರೆ ಅದರಂತಹ ಮರ ಬೆಳೆಯಬೇಕಾದರೆ ಎಷ್ಟೋ ವರ್ಷಗಳ ಕಾಲ ಬೇಕಾಗುತ್ತದೆ. ಬೆಂಗಳೂರಿಗೆ ಸೌದೆಯ ಸರಬರಾಜಿಗಾಗಿ ವ್ಯಾಪಾರಿಗಳು ಎಷ್ಟೋ ಮರಗಳನ್ನು ಕಡಿಯುತ್ತಾರೆ, ಹಾಳುಮಾಡುತ್ತಾರೆ. ಹಿಂದೆ ನಮ್ಮಲ್ಲಿ ಮರಗಳನ್ನು ಹಾಕಿದರೆ ವಂಶಾಭಿವೃದ್ಧಿಯಾಗುತ್ತದೆ ಎಂಬ ಗಾದೆ ಇತ್ತು. ಅದಕ್ಕೇ ಮಾವಿನ ಮರ, ಹುಣಸೇಮರ ಇಂಥ ಮರಗಳನ್ನು ಮುದುಕರು ನೆಡುತ್ತಾ ಇದ್ದರು. ನೆಟ್ಟು ಸತ್ತು ಹೋಗುತ್ತಾ ಇದ್ದರು. ಈಗ ಮುದುಕರು ನೆಡುವುದಿಲ್ಲ. ಏಕೆಂದರೆ ಇನ್ನೂ ಬದುಕಬೇಕೆಂಬ ಆಶೆ ಏನೋ ಯಾವ ಮರ ನೆಡುವುದಕ್ಕೂ ಹೋಗುವುದಿಲ್ಲ.

ಅಧ್ಯಕ್ಷರು.—ಆಶೆ ತಪ್ಪುವುದಿಲ್ಲ. ಮುದುಕರೂ ಬದುಕಬೇಕೆಂದೇ ಆಶೆಪಡುತ್ತಾರೆ.

ಶ್ರೀ ಎಸ್. ಗೋಪಾಲಗೌಡ.—ಬದುಕಲಿ. ಆದರೆ ಕೆಲಸಮಾಡದೇ ಬದುಕುವುದರಲ್ಲಿ ಏನು ಅರ್ಥವಿದೆ? ಹಿಂದೆ ವಾನಪ್ರಸ್ಥಾಶ್ರಮಕ್ಕೆ ಹೋಗುತ್ತಾ ಇದ್ದರು. ಈಗ ಅದೂ ಬಿಟ್ಟರು. ಎಲ್ಲಾ ಊರಿನಲ್ಲೇ ಇರುತ್ತಾರೆ. (ನಗು!)

ಆದುದರಿಂದ ವನದ ಬಗ್ಗೆ ಜನರು ನಿಗಾವಹಿಸಬೇಕು. ಸರ್ಕಾರದ ಜೊತೆಗೆ ರೈತರೂ ಮುತುವರ್ಜಿ ವಹಿಸಬೇಕು. ಸರ್ಕಾರದವರು ನಿಮಗೆ ಇಷ್ಟು ಹಣ ಕೊಡುತ್ತೇವೆ ಎಂದು ಏನಾದರೂ ಹೇಳಿ ಪ್ರೋತ್ಸಾಹ ಕೊಡಬೇಕು. ಹೆಚ್ಚು ಕಾಡನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು. ಈ ಮಸೂದೆಯಲ್ಲಿ ಇದಕ್ಕೆಲ್ಲಾ ಒಳ್ಳೆಯ ರೀತಿಯಲ್ಲಿ ಸ್ಪಷ್ಟವಾಗಿ ಅವಕಾಶ ಕಲ್ಪಿಸಬೇಕು. ಒಳ್ಳೆಯ ರೀತಿಯಿಂದ ಮಸೂದೆ ತಯಾರಿಸಿದ್ದಾರೆ. ಇನ್ನೂ ಕೆಲವು ವಿಷಯಗಳಲ್ಲಿ ತಿದ್ದುಪಡಿ ಮಾಡಿದರೆ ಒಳ್ಳೆಯ ಕಾನೂನಾಗಿ ಅದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆಂದು ಈ ಸಂದರ್ಭದಲ್ಲಿ ಅರಿಕೆ ಮಾಡುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ (ಶೃಂಗೇರಿ).—ಮಾನ್ಯ ಅಧ್ಯಕ್ಷರೆ, ರಾಜ್ಯದ ವಿವಿಧ ಭಾಗಗಳಲ್ಲಿರುವ ಕಾನೂನುಗಳನ್ನು ಒಟ್ಟುಗೂಡಿಸಿ ಏಕ ರೂಪತೆಯ ಕಾನೂನನ್ನು ಮಾಡತಕ್ಕ ಉದ್ದೇಶದಿಂದ ಈ ವಿಧೇಯಕವನ್ನು ಮಾನ್ಯ ಮಂತ್ರಿಗಳು ಮಂಡಿಸಿದ್ದಾರೆ. ಈ ವಿಧೇಯಕವನ್ನು ಸಮರ್ಥಿಸುತ್ತಾ ಒಂದೆರಡು ಮಾತುಗಳನ್ನು ಹೇಳುವ ಸಲುವಾಗಿ ನಾನು ನಿಂತಿದ್ದೇನೆ. ಮೈಸೂರು ರಾಜ್ಯದಲ್ಲಿ ಕಾಡು ಮಲೆನಾಡಿನಲ್ಲಿ ಹೆಚ್ಚಾಗಿದೆ. ಈ ಮಲೆನಾಡಿನ ವಾಸ್ತವಿಕ ಸ್ಥಿತಿಯನ್ನು

(ಶ್ರೀ ಕಡಿದಾಳ್ ಮಂಜಪ್ಪ)

ಮಾನ್ಯ ಮಂತ್ರಿಗಳೂ ಮತ್ತು ಸೆಲೆಕ್ಟ್ ಕಮಿಟಿಯ ಸದಸ್ಯರೂ ತಿಳಿದುಕೊಳ್ಳತಕ್ಕದ್ದೂ ಅವಶ್ಯಕ. ಅರಣ್ಯ ಬೆಳೆಸುವುದು ಬಹಳ ಅವಶ್ಯಕ. ಈ ವಿಚಾರದಲ್ಲಿ ಭಿನ್ನಾಭಿಪ್ರಾಯವಲ್ಲ. ಆದರೆ ಅರಣ್ಯದ ಪಕ್ಕದಲ್ಲಿ ವಾಸಮಾಡುವ ಜನರೂ ಕೂಡ ಬದುಕಬೇಕು ಎಂಬುದನ್ನು ನಾವೆಲ್ಲರೂ ಮನಗಾಣಬೇಕಾಗಿದೆ. ಮಲೆನಾಡಿನಲ್ಲಿ ರೈತಾಪಿ ಜನರಿಗೆ ಕೆಲವು ರಿಯಾಯಿತಿಗಳನ್ನು ಸರ್ಕಾರದವರು ಮೊದಲಿನಿಂದಲೂ ಕೊಟ್ಟು ಕೊಂಡು ಬಂದಿದ್ದಾರೆ; ವ್ಯವಸಾಯಕ್ಕೆ ಬೇಕಾದ ಮರಮುಟ್ಟುಗಳನ್ನು ಗಿಡಗಳಿಂದ ತೆಗೆದುಕೊಳ್ಳುವ ಹಕ್ಕನ್ನು ಅವರಿಗೆ ಕೊಟ್ಟಿದ್ದಾರೆ ಮತ್ತು ಸೊಪ್ಪು, ತರಗೆಲೆ ಮುಂತಾದುವುಗಳನ್ನು ತೆಗೆದುಕೊಳ್ಳುವ ಹಕ್ಕನ್ನು ಕೂಡ ಕೊಟ್ಟಿದ್ದಾರೆ. ಸೌದೆ ತರುವ ಹಕ್ಕನ್ನು ಕೊಟ್ಟಿದ್ದಾರೆ. ಇತ್ತೀಚೆಗೆ ಈ ಹಕ್ಕು ಮೊಟಕಾಗುತ್ತಿದೆ. ಮೈದಾನ ಮತ್ತು ಬೈಲು ಸೀಮೆಗಳಿಗೆ ಸ್ವಲ್ಪ ವ್ಯತ್ಯಾಸವಿದೆ. ಮೈದಾನದಲ್ಲಿ ಗೋಮಾಳವಿದೆ, ಆಕಾರ ಕಂಡ ಬಂಜರಿದೆ, ಜೊತೆಗೆ ಆಕಾರ ಕಾಣದಿರುವ ಬಂಜರಿದೆ. ಆದುದರಿಂದ ಸಾಮೂಹಿಕವಾಗಿ ಗ್ರಾಮಸ್ತರು ಸಾಮೂಹಿಕ ಪ್ರಯೋಜನಕ್ಕೆ ಮೀಸಲಾಗಿದ್ದ ಜಮೀನುಗಳನ್ನು ಉಗಯೋಗಿಸಿಕೊಳ್ಳಲು ಅವಕಾಶವಿಲ್ಲ. ಮಲೆನಾಡಿನಲ್ಲಿ ಈಗ ತಾನೆ ಶ್ರೀಮಾನ್ ಗೋಪಾಲಗೌಡರು ಹೇಳಿದ ಹಾಗೆ ಹಿಡುವಳಿಗೆ ಸೇರಿದ್ದ ಜಮೀನು ಕಾಲಕ್ರಮೇಣ ಅರಣ್ಯಕ್ಕೆ ಸೇರಿತು. ಹಿಂದೆ ಗೋಮಾಳವಾಗಿದ್ದ ಪ್ರದೇಶ ಈಗ ಗೋಮಾಳ ಎಂದು ರೆವಿನ್ಯೂ ಇಲಾಖೆಯಲ್ಲಿ ನಮೂದಾಗಿದ್ದರೂ ಅಲ್ಲಿ ಅರಣ್ಯ ಬೆಳೆದಿರುವುದರಿಂದ ರೈತಾಪಿ ಜನರು ಈ ಜಮೀನಿಗೆ ಪ್ರವೇಶ ಕೊಡುವುದಕ್ಕೆ ಅವಕಾಶವಿಲ್ಲ. ಹಳ್ಳಿಯವರು ಮತ್ತು ಬಡ ಜನರು ಮನೆಕಟ್ಟಿಕೊಳ್ಳಲು ಜಾಗಬೇಕೆಂದರೆ ಅದೆಲ್ಲಾ ಅರಣ್ಯ, ಅಲ್ಲಿ ಅವಕಾಶ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಮೈದಾನದಲ್ಲಿ ಗ್ರಾಮ ಠಾಣ ಎಂಬ ಪ್ರದೇಶವಿದೆ. ಅಲ್ಲಿ ಸರ್ಕಾರ ಪ್ರಯತ್ನ ಮಾಡಿದರೂ ಕೂಡ ಸಾಮಾನ್ಯ ಜನರಿಗೆ ಮನೆಕಟ್ಟಿಕೊಳ್ಳುವುದಕ್ಕೆ ಸ್ಥಳವನ್ನೊದಗಿಸುವುದು ಬಹಳ ಕಷ್ಟವಾಗಿದೆ. ಮಲೆನಾಡಿನಲ್ಲಿ ಊರ ಪಕ್ಕದಲ್ಲಿರುವುದು ಮತ್ತು ಊರಲ್ಲಿರುವ ಎಲ್ಲ ಜಮೀನು ಕೂಡ ಕಾಡಾಗಿದೆ. ಶರಾವತಿ ಯೋಜನೆ ಪರಿಣಾಮವಾಗಿ ಜಮೀನನ್ನು ಕಳೆದುಕೊಳ್ಳುವ ಜನರಿಗೆ ಪುನರ್ವಸತಿಗಾಗಿ ಜಮೀನನ್ನು ಕೊಡಬೇಕೆಂದು ಎರಡು ವರ್ಷ ಅರಣ್ಯ ಇಲಾಖೆಯವರನ್ನು ನಾವು ಕೇಳಿದೆವು. ಆಗ ಅವರು ರೆವಿನ್ಯೂ ಇಲಾಖೆಗೆ ಸೇರಿದ ಜಮೀನನ್ನು ನೀವು ಬಿಟ್ಟುಕೊಟ್ಟರೆ ನಾವು ಬಿಡುತ್ತೇವೆಂದು ಹೇಳಿದರು. ಆದಕ್ಕೆ ಆಗಬಹುದು, ಆದರೆ ರೈತಾಪಿಜನರಿಗೆ ತೊಂದರೆಯಾಗದ ರೀತಿಯಲ್ಲಿ ರೆವೆನ್ಯೂ ಇಲಾಖೆಗೆ ಸೇರಿರುವ ಜಮೀನನ್ನು ಬಿಟ್ಟುಕೊಡಲು ಅಡ್ಡಿಯಿಲ್ಲ ಎಂದು ಹೇಳಿದರು. ಈಗ ಒಂದು ವರ್ಷದಿಂದ ಡಿಸ್ಟ್ರಿಕ್ಟ್ ಫಾರೆಸ್ಟಿನಲ್ಲಿ ರೈತರಿಗೆ ಕೆಲವು ಹಕ್ಕು ಬಾಧ್ಯತೆಗಳಿವೆ, ಅದನ್ನೆಲ್ಲಾ ಅರಣ್ಯ ಇಲಾಖೆ ತೆಗೆದುಕೊಳ್ಳಬೇಕು ಎಂದು ಶಿಫಾರ್ಸಾಗಿತ್ತು, ಗೋಮಾಳವನ್ನು ಕೂಡ ಅರಣ್ಯಕ್ಕೆ ತೆಗೆದುಕೊಳ್ಳಬಹುದೆಂದು ಶಿಫಾರ್ಸಾಗಿದೆ. ಹಾಗಾದರೆ ಜನ ಎಲ್ಲಿ ಹೋಗಬೇಕೆಂಬುದನ್ನು ವಿಚಾರ ಮಾಡಬೇಕಾಗಿದೆ. ಈಗ ಎರಡು ನಿರ್ದಿಷ್ಟ ನೀತಿ ಅನುಸರಿಸಬೇಕಾಗಿದೆ. ರೈತರಿಗೆ ಸಂಬಂಧಪಟ್ಟ ನೀತಿ ಉದಾರವಾಗಿರಬೇಕು. ಅವರಿಗೆ ಮನೆಕಟ್ಟುವುದಕ್ಕೆ ಜಮೀನು ಬೇಕಾದಾಗ ಅಥವಾ ಅರಣ್ಯ ಪ್ರದೇಶದಿಂದ ವ್ಯವಸಾಯದ ಸಾಮಗ್ರಿಗಳನ್ನು ತರುವಾಗ ಅಥವಾ ಗ್ಯಾಂಗ್‌ಮೆನ್ ಅರಣ್ಯಕ್ಕೆ ಹೋದಾಗ ಉದಾರ ನೀತಿ ಸರ್ಕಾರದಲ್ಲಿರಬೇಕು. ಯಾರು ಅಕ್ರಮವಾಗಿ ಅರಣ್ಯದಿಂದ ನಾಟಾ ಅಥವಾ ಮರಮುಟ್ಟುಗಳನ್ನು ತೆಗೆದುಕೊಂಡು ಬರುವರೋ ಅವರ ವಿಚಾರದಲ್ಲಿ ಬೇರೆ ನೀತಿಯಿರಬೇಕು; ಅಂಥವರ ವಿಚಾರದಲ್ಲಿ ಸಹಾನುಭೂತಿ ಅನಾವಶ್ಯಕ. ಆದರೆ ರೈತರ ವಿಚಾರದಲ್ಲಿ ಸಹಾನುಭೂತಿಯುತ ನೀತಿಯು ಬಹಳ ಅವಶ್ಯಕ ಎಂದು ಮನವಿ ಮಾಡುತ್ತೇನೆ. ಎರಡನೆಯದಾಗಿ ಗ್ರಾಮದ ಪಕ್ಕದಲ್ಲಿರುವ ಅರಣ್ಯದ ವಿಚಾರದಲ್ಲಿ ಯಾವ ನೀತಿಯನ್ನಿಟ್ಟುಕೊಂಡಿದೆ, ಅದೇ ನೀತಿಯನ್ನು ಗ್ರಾಮಕ್ಕೆ ಬಹಳ ದೂರವಿರುವ ಅರಣ್ಯದ ವಿಚಾರದಲ್ಲಿ ಇಡುವುದಕ್ಕಾಗುವುದಿಲ್ಲ. ಬಹಳ ದೂರವಿರುವ ಅರಣ್ಯ ಪ್ರದೇಶದಲ್ಲಿ ಕಟ್ಟುನಿಟ್ಟಾದ ನೀತಿಯನ್ನನುಸರಿಸಬಹುದು. ಆದರೆ ಗ್ರಾಮದ ಪಕ್ಕದಲ್ಲಿರುವ ಕಾಡುಗಳಲ್ಲಿ ಸ್ವಲ್ಪ ಮಟ್ಟಿಗೆ ರೈತರ ಹಿತದೃಷ್ಟಿಯಿಂದ ನಿಮ್ಮ ನೀತಿ ಉದಾರವಾಗಿರಬೇಕು. ರೈತರು ಜಮೀನು ಸಾಗುವಳಿ ಮಾಡಬೇಕಾದರೆ ಸ್ವಾಭಾವಿಕವಾಗಿ ಕಾಡಿಗೆ ಹೋಗಬೇಕು. ಅಂಥ ಸಂದರ್ಭಗಳಲ್ಲಿ ರೈತರಿಗೆ ಸ್ವಲ್ಪ ರಿಯಾಯಿತಿ ಕೊಡದಿದ್ದರೆ ಕಷ್ಟವಾಗುತ್ತದೆ. ಊರಿಗೆ ದೂರವಾಗಿರುವ ಅರಣ್ಯಗಳಲ್ಲಿ ನಿಮ್ಮ ನೀತಿಯನ್ನು ಎಷ್ಟು ಪರಿಪಾಲನೆ ಕೂಡಿದರೂ ಪರವಾಗಿಲ್ಲ. ಆದರೆ ಊರ ಪಕ್ಕದಲ್ಲಿರುವ ಸ್ಥಳಗಳಲ್ಲಿ ಸ್ವಲ್ಪಮಟ್ಟಿಗೆ ರೈತರಿಗೆ ಕೆಲವು ಸೌಲಭ್ಯಗಳನ್ನು ಒದಗಿಸಿಕೊಡಬೇಕು ಎಂದು ಮನವಿಮಾಡಿಕೊಳ್ಳುತ್ತೇನೆ.

ಆಮೇಲೆ ಗ್ರಾಮದ ಪಕ್ಕದಲ್ಲಿರತಕ್ಕ ಕೆಲವು ಕಾಡುಗಳಲ್ಲಿ ಕೆಲವು ಹಕ್ಕುಗಳನ್ನು ಕೊಟ್ಟು ಒಬ್ಬೊಬ್ಬರಿಗೆ ಒಂದೆರಡು ಎಕರೆ ಜಮೀನನ್ನು ಕೊಟ್ಟರೆ ಆ ಜಮೀನನ್ನು ಅವನು ಅನುಭವಿಸಿಕೊಂಡು ಬಂದು ಅದರಲ್ಲಿ ಬೆಳೆಯುವ ಗಂಧದ ಮರಗಳನ್ನು ಸರ್ಕಾರಕ್ಕೆ ಕೊಡುವ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಕಾಡುಗಳು ಯಾರ ಸ್ವತ್ತೂ ಅಲ್ಲ. ಆದರೆ ಹಳ್ಳಿಯ ರೈತನಿಗೆ ನಿರ್ದಿಷ್ಟವಾದ ಹಕ್ಕು ಭಾದ್ಯತೆಗಳನ್ನು ಕೊಟ್ಟರೆ ಅವನು ಆಪ್ರದೇಶವನ್ನು ರಕ್ಷಣೆ ಮಾಡುತ್ತಾನೆ. ಕೆಲವು ಮರಗಳನ್ನೂ ಗಿಡಗಳನ್ನೂ ಬೆಳೆಯುತ್ತಾನೆ. ಅಂಥ ಪ್ರಶೇದಲ್ಲಿ reserved varieties of timber trees ಬೆಳೆದರೆ ಅವನ್ನು ಸರ್ಕಾರಕ್ಕೆ ಕೊಡಬೇಕೆಂದು ನಿಯಮಗಳನ್ನು ಮಾಡಬಹುದು. ಹೀಗೆ ಮಾಡುವುದು ಬಹುಳ ಅನುಕೂಲವೆಂದು ನನಗನಿಸುತ್ತದೆ.

ಕೊನೆಯದಾಗಿ, ಗೋಮಾಳವನ್ನು ಅರಣ್ಯ ಇಲಾಖೆಗೆ ತೆಗೆದುಕೊಳ್ಳುವಾಗ, ಅಲ್ಲಲ್ಲಿನ ಜನರ ಅವಶ್ಯಕತೆ ಮತ್ತು ಅಲ್ಲಿನ ಜನರು ಅನಾದಿಯಿಂದ ಅನುಭವಿಸಿಕೊಂಡು ಬಂದಿರುವ ಸಾಂಪ್ರದಾಯಕ ಹಕ್ಕುಗಳನ್ನೂ ಗಮನದಲ್ಲಿಟ್ಟುಕೊಳ್ಳಬೇಕೆಂದು ಮನವಿಮಾಡಿಕೊಳ್ಳುತ್ತೇನೆ. ಮುಖ್ಯವಾಗಿ ಅವರು ವಾಸಮಾಡುವುದಕ್ಕೆ ಸ್ಥಳವನ್ನು ಕೊಡಬೇಕು. ಮನೆಗಳನ್ನು ಕೊಡದಿದ್ದರೂ ಕೂಡ ವಾಸಮಾಡುವುದಕ್ಕೆ

ಜಾಗಕೊಡುವುದು ಕರ್ತವ್ಯ. ಅದೂ ಪಾರೆಸ್ಟ್ ಇದೂ ಫಾರೆಸ್ಟ್ ಎಂದರೆ ಅವನು ಎಲ್ಲಿಹೋಗಬೇಕು? ಇದನ್ನು ಮಾನ್ಯ ಮಂತ್ರಿಗಳು ಗಮನದಲ್ಲಿಟ್ಟು ಕೊಳ್ಳಬೇಕೆಂದು ಹೇಳಿ, ನನ್ನ ಎರಡು ಮಾತನ್ನು ಮುಗಿಸುತ್ತೇನೆ.

†Sri D. PARAMESWARAPPA (Honnali).—Mr. Speaker, Sir, so far as the Mysore Forest Bill is concerned, the previous speakers who come from the heart of Malnad District, *i. e.*, Shimoga District, have spoken on this Bill. Though I came from Shimoga District, I do not come from the area where there is any forest at all. I come from an area which is a maidan plane, where certain privileges have been denied to the ryots and to the people of the taluk when compared to those privileges that have been enjoyed by those who are living in the heart of Malnad area. I would like to make certain observations with regard to the area called Maidan area. We have been making representations to the Government that there are a large number of areas in the Maidan taluks which is not at all conducive to forest growing and which, in the interest of the people, should be released immediately for the purposes of cultivation, so as to step up food production in the country. I hope that the Hon'ble Forest Minister will kindly take into consideration this aspect and will certainly help those landless people by releasing such survey numbers as not necessary for purposes of forest growth.

In the Statement of Objects and Reasons, it has been made clear that in order to bring about uniformity in Forest law and in order to prevent the exploitation of the sandal trees, this Bill has been introduced. As was estimated by the Minister himself, the growth of sandalwood is of large importance to the country because sandalwood tree is considered one of the most important products as it earns foreign exchange and also it is required for medicinal purposes and it is most valuable. Hitherto a nominal Royalty was given to those people who were growing sandalwood trees, which is a most valuable and most important tree. I request the Minister to see that the Royalty to the growers of sandalwood trees be enhanced, because, by enhancing Royalty, there will be a sort of incentive for the people to grow sandalwood trees and thereby the country may be benefited by a large extent. That is one of the suggestions that I would like to make on the floor of the Assembly.

So far as the other point which I would like to stress upon at this moment, exploitation of forest is concerned, most of the exploitation is done by people who live in the heart of the forest area and not by the people of Maidan parts. I would like to bring to the notice of the Hon'ble Minister that the people of the Maidan parts are much harassed. I do not wish to make use of such a strong term, but I would like to say that they are subject to harassment in this respect. The agriculturists who bring fuel for purposes of domestic use are subject to much harassment and I would like the Minister to take a lenient view of those persons. Or, in the alternative, I would like to suggest, if it is not possible to indiscriminately go on issuing licences, to open such depots in the area where there is absolutely no forests, for supplying implements to the agriculturists and fuel for domestic purposes. That would also help Government in preventing exploitation and other malpractices by persons.

Sir, there was a stage when it was considered by people, or there was a common belief among the people that these forests were necessary for purposes of rainfall, and by extending forests, the trees would attract clouds and there would be rainfall.

Sri D. PARAMESWARAPPA

That was an opinion hitherto existing. But, there is no truth in that opinion. Because, by experience, we see that even if there are a greater number of trees, there is no rain at all, in certain places.

Now forests are essential for purposes of industry. Therefore, Government is bent upon increasing the forest area or to encourage people in this field. So far as industries are concerned, forests are essential, for example, for the Iron and Steel industry at Bhadravathi, charcoal is necessary. Hence it is necessary to increase the extent of forest area.

Even for the manufacture of paper, bamboo is very essential and so bamboo growing is encouraged by the Forest Department. There are many industries like that. To encourage those industries it is necessary to grow the raw materials for those industries in our forests.

4-30 P.M.

Since this Bill is going to be referred to a Select Committee I do not wish to go into details now. I would however, point out to the Minister that the definition of 'timber' is very vague. There are certain other things also which give rise to ambiguities. Particularly, the definition of 'timber' in the Bill is likely to create an embarrassing position and it will lead to litigation because even sawn material is likely to be construed as timber. It will certainly give room to the unscrupulous Forest Officer to harass the people. So I would request the Forest Minister to make the definition of 'timber' very precise and clear and see that it does not apply to swan materials and finished products.

Then the Forest Settlement Officer is given the authority to try cases arising out of disputes. In my opinion such disputes should always be tried by a judicial officer and not by an executive officer because in the hands of the executive officer, I am afraid, no justice can be had. So I submit that provision should be made to see that disputes are tried by a judicial officer instead of the Forest Settlement Officer.

Then, Sir, the Government used to spend lot of money on Vanamahotsava and plant trees, but immediately afterwards those trees used to disappear. In that way it resulted in waste of public money. We do not see the benefit of spending so much money on Vanamahotsava. If the present Government intend to continue such a practice of observing Vanamahotsava every year and spending huge sums of money for the same, it would certainly be a waste of public money. Instead I would suggest that those who come forward to plant trees may be given some royalty for growing tress.

Then, Sir, people in malnad areas have been given certain privileges. Those privileges should be extended to the people in maidan areas also because there are no forests there and the people who require fuel and other implements for agricultural operations should not be harassed.

With these observations I hope that when the Bill is considered in the Select Committee the Minister will see that the necessary amendments are made to the various clauses.

†ಶ್ರೀ ಶರಣಪ್ಪ (ದೇವದುರ್ಗ).—ಮಾನ್ಯ ಅಧ್ಯಕ್ಷರೇ, ಈಗ ಸಭೆಯ ಮುಂದೆ ತಂದಿರತಕ್ಕ ಈ ಅರಣ್ಯ ಮಸೂದೆಯನ್ನು ನಾನು ಅನುಮೋದಿಸುತ್ತೇನೆ ಮತ್ತು ಸಮರ್ಥಿಸುತ್ತೇನೆ. ಅನೇಕ ಭಾಗಗಳಲ್ಲಿ ಇರತಕ್ಕ ಅರಣ್ಯದ ಕೆಲವೊಂದು ವಿಷಯಗಳ ಬಗ್ಗೆ ನಾನು ಸರ್ಕಾರದ ಗಮನಕ್ಕೆ ಒಂದೆರಡು ಮಾತುಗಳನ್ನು ತರಲು ಇಲ್ಲಿ ನಿಂತಿದ್ದೇನೆ. ಈಗಿನ ಅರಣ್ಯ ವಿಷಯವಾಗಿ ವಿಚಾರಮಾಡುವುದಾದರೆ ನಮ್ಮ ದೇಶದಲ್ಲಿ ಅರಣ್ಯಸಂಪತ್ತು ದಿನೇದಿನೇ ಕಡಿಮೆಯಾಗುತ್ತಿದೆ. ಅದಕ್ಕೆ ಕಾರಣ ಇಷ್ಟೆ. ಕೆಲವೊಂದು ಕಾಲದಲ್ಲಿ ಈ ರಾಜ್ಯದ ಒಂದು ಆಡಳಿತ ದೃಷ್ಟಿಯಿಂದ ಈ ಅರಣ್ಯ ಸಂಪತ್ತಿನ ಮೇಲೆ ಜನರು ಅದಷ್ಟು ದುರುಪಯೋಗ ಮಾಡದಂತೆ ಎಷ್ಟೋ ಕಟ್ಟು ನಿಟ್ಟುಗಳನ್ನು

ಹಾಕಿ ಅದಷ್ಟು ಅದನ್ನು ಕಾಯುವ ಪ್ರಯತ್ನ ಮಾಡುತ್ತಿದ್ದರು. ಈಗ ಅದಷ್ಟು ಹೆಚ್ಚಿಗೆ ಕಾಯಿದೆ ದೃಷ್ಟಿಯಿಂದಲೋ ಅಥವಾ ಕಾಯಿದೆಗಳೆಲ್ಲಿಲ್ಲಿದೆಯೋ ಯಾವುದೋ ಒಂದು ರೀತಿ ದುರುಪಯೋಗಮಾಡಿ ಅರಣ್ಯ ಸಂಪತ್ತನ್ನು ನಾಶಮಾಡುವುದಕ್ಕೆ ಈಗ ಅವಕಾಶವನ್ನು ಕೊಟ್ಟಿದ್ದೀರಿ. ಇದರಿಂದ ಅನೇಕ ಜನರು ಅರಣ್ಯದಲ್ಲಿರತಕ್ಕ ಒಳ್ಳೊಳ್ಳೆಯ ಮರಗಳನ್ನು ಕಡಿದು ಹಾಕಿ ಬರೀ ಅರಣ್ಯ ಸಂಪತ್ತನ್ನು ನಾಶಮಾಡುವುದಲ್ಲದೆ ಮರಗಿಡಗಳನ್ನು ನೆಡುವ ಕೆಲಸವನ್ನು ಸಹ ಇತ್ತೀಚೆಗೆ ಕೈಬಿಟ್ಟಿದ್ದಾರೆ. ಇನ್ನು ನಾಡಿನ ಅನೇಕ ಭಾಗಗಳಲ್ಲಿ ಹಳ್ಳಿಗಾಡಿನ ಜನರಿಗೆ ಈ ಮರಗಳಿಂದ ಮನೆ ಕಟ್ಟುವ ಕಾಲದಲ್ಲಿ ಆದರಲ್ಲಿಯೂ ಒಕ್ಕಲುತನ ಮಾಡುವುದಕ್ಕೆ ಕೆಲಸಗಳನ್ನು ಮಾಡುವಾಗ, ಕಟ್ಟಿಗೆಗಳನ್ನೂ ಕೂಡ ಸಂಗ್ರಹಿಸುವುದಕ್ಕೆ ಅವರಿಗೆ ಅನಾನುಕೂಲವಾಗಿದೆ. ಆದಕಾರಣ ಈ ವಿಷಯದಲ್ಲಿ ಒಂದೆರಡು ಮಾತುಗಳನ್ನು ಮಾನ್ಯ ಸಚಿವರ ಗಮನಕ್ಕೆ ತರಲು ನಿಂತಿದ್ದೇನೆ. ಈಗ ನಮ್ಮ ಅರಣ್ಯ ಶಾಖೆಯ ಬಗ್ಗೆ ಎಷ್ಟೋ ಸಲ ಅನೇಕ ಜನರು ಅನೇಕ ರೀತಿಯಾಗಿ ತಂತಮ್ಮ ಕೆಲವೊಂದು ವಿಚಾರಗಳನ್ನು ವ್ಯಕ್ತಪಡಿಸಿದರು. ಆದರೆ ಸಂಬಂಧಪಟ್ಟ ಅಧಿಕಾರಿಗಳು ಕೆಲವೊಂದು ಪ್ಲಾಂಟೇಷನ್‌ಗಳನ್ನು ಅಲ್ಲಿ ಅಫಾರೆಸ್ಟೇಷನ್ ಮಾಡುವಾಗ, ಮರಗಿಡಗಳನ್ನು ನೆಡುವ ಪ್ರಸಂಗ ಬಂದಾಗ್ಗೆ ಯಾವ್ಯಾವ ಭೂಮಿಯಲ್ಲಿ ಯಾವ್ಯಾವ ಮರಗಳನ್ನು ಬೆಳೆಯಬೇಕು, ಯಾವ್ಯಾವ ಮರಗಳನ್ನು ರಕ್ಷಣೆ ಮಾಡಬೇಕು, ಅರಣ್ಯ ಸಂಪತ್ತನ್ನು ಯಾವರೀತಿ ಬೆಳೆಸಬೇಕೆಂಬ ವಿಚಾರವೂ ಕೂಡ ಸರಿಯಾಗಿ ಈ ಮಸೂದೆಯಲ್ಲಿ ಇಲ್ಲದಂತಾಗಿದೆ ಎಂದು ನಾನು ಹೇಳುತ್ತೇನೆ.

ಯಾವ ಪ್ರದೇಶದಲ್ಲಿ ಯಾವ ಮರಗಳು ಬೆಳೆಯುತ್ತವೆ, ಯಾವ ಮರಗಳು ಸರಿಯಾಗಿ ಬೆಳೆಯುವುದಿಲ್ಲ ಎಂಬುದನ್ನು ಆಲೋಚನೆ ಮಾಡದೆ ಈಗ ಕೆಲವೊಂದು ಪ್ರದೇಶದಲ್ಲಿ ಬೇವಿನ ಮರ–ಹುಣಸೆ ಮರ–ಹುಣಸೇ ಮರ ಬೆಳೆಯುವ ಜಾಗದಲ್ಲಿ ಸ್ಯಾಂಡಲ್ ಟ್ರೀ ಹೀಗೆಲ್ಲ ಬೆಳೆಸಲು ಪ್ರಯತ್ನಿಸಿ–ಅಲ್ಲಿ ಆ ಸಸಿಗಳನ್ನು ಹಾಕುವುದಕ್ಕೆ ಪ್ರಯತ್ನ ನಡೆಸಿದ್ದಾರೆ. ಆದರೆ ಇದರಿಂದ ಸರ್ಕಾರಕ್ಕೆ ಹೆಚ್ಚು ಹಣ ಖರ್ಚಾಗುತ್ತದೆ, ಪ್ರಯೋಜನವಿರುವುದಿಲ್ಲ. ಇಂಥ ಅರಣ್ಯಗಳನ್ನು ಬೆಳೆಸುವುದು ನಿಷ್ಪ್ರಯೋಜನವಾಗುತ್ತದೆಂದು ನನ್ನ ಭಾವನೆ. ಆದುದರಿಂದ ಈ ಅರಣ್ಯ ಇಲಾಖೆಗೆ ಸಂಬಂಧಪಟ್ಟವರು ಆಗಿಂದಾಗ್ಗೆ ಜನರಿಗೆ ಯಾವ ಪ್ರದೇಶದಲ್ಲಿ ಯಾವ ಮರಗಳನ್ನು ನೆಡಬೇಕೆಂಬ ಬಗ್ಗೆ ತಿಳುವಳಿಕೆ ಕೊಡುವುದಲ್ಲದೆ ಆ ಮರಗಳನ್ನು ಯಾವ ರೀತಿ, ಯಾವ ಕ್ರಮದಲ್ಲಿ ಬೆಳೆಸಬೇಕೆಂಬುದನ್ನು ವಿಚಾರಮಾಡಬೇಕು. ಆ ಅಂಶವನ್ನು ನಾನು ಈ ಸಂದರ್ಭದಲ್ಲಿ ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ವಿಚಾರಗಳನ್ನೂ ಸಹ ಇಂಥ ಕಾನೂನಿನಲ್ಲಿ ಸೇರಿಸಬೇಕು. ಆದುದರಿಂದ ಈಗ ಈ ವಿಚಾರಗಳನ್ನೆಲ್ಲಾ ಸರ್ಕಾರದವರ ಗಮನಕ್ಕೆ ತರುತ್ತಿದ್ದೇನೆ. ಆದರೆ ಪ್ರತಿಯೊಬ್ಬರೂ ಅರಣ್ಯ ಸಂಪತ್ತು ಹೆಚ್ಚಾದರೆ ನಮ್ಮ ದೇಶದ ಸಂಪತ್ತು ಹೆಚ್ಚಾಗುತ್ತದೆ, ದೇಶದಲ್ಲಿ ಮಳೆ ಬೆಳೆಗಳು ಚೆನ್ನಾಗಿ ಆಗುತ್ತವೆ, ಭೂಮಿ ಫಲವತ್ತಾಗುತ್ತದೆ ಎಂದು ಹೇಳುತ್ತಾರೆ. ಈ ಅರಣ್ಯವೊಂದು ಬೆಳೆಸುವುದನ್ನೇ ಹೇಳಿದರೆ ಈ ದಿವಸ ದೇಶದಲ್ಲಿ ರೈತಾಪಿ ಕಸುಬಿನಲ್ಲಿರತಕ್ಕ ನೂರಕ್ಕೆ 80-85 ಜನರಿಗೆ ಪ್ರತಿದಿನವೂ ಅವರ ಒಕ್ಕಲು ತನಕ್ಕೆ ಅಂದರೆ ರಂಟೆ, ಕುಂಟೆ, ರಾಟೆ, ಇತ್ಯಾದಿ ಅನೇಕ ಸಾಮಾನುಗಳು ಅಗತ್ಯವಿರುತ್ತದೆ. ಈ ಸಾಮಾನುಗಳನ್ನು ಪೇಟೆಗೆಹೋಗಿ ಕೊಂಡುತರುವ ಶಕ್ತಿ ಆ ಜನಗಳಿಗಿರುವುದಿಲ್ಲ. ಆದಾಯವಿರತಕ್ಕ ಜನರಿಗೆ ಯಾವ ಸಾಮಾನಾದರೂ ಸಿಗುತ್ತದೆ. ಆದುದರಿಂದ ಹಳ್ಳಿಗಾಡುಗಳಲ್ಲಿತಕ್ಕ ಒಕ್ಕಲುತನದ ಜನರಿಗೆ ಕಾಡು ಪ್ರದೇಶದಲ್ಲಿರತಕ್ಕ ಜನಗಳಿಗೆ ಅವರ ಉಪಯೋಗಕ್ಕೆ ಬೇಕಾದ ಕಟ್ಟಿಗೆ ವಗೈರೆ ಸಾಮಾನುಗಳಿಗೆ ಅವರು ಈ ಅರಣ್ಯದಲ್ಲಿರುವ ಮರಗಳನ್ನು ಕೆಲವನ್ನಾದರೂ ಬಳಿಸಲು ಅವರಿಗೆ ಈ ಮಸೂದೆಯಲ್ಲಿ ಒಂದು ಅನುಕೂಲವನ್ನು ಕಲ್ಪಿಸಬೇಕಾಗಿತ್ತು. ಅದಕ್ಕಾಗಿ ಈಗ ವಿಚಾರವನ್ನು ಸರ್ಕಾರದವರ ಗಮನಕ್ಕೆ ತರುತ್ತಿದ್ದೇನೆ. ಹೀಗೆ ಇನ್ನು ಆ ಕಾಡುಗಳಲ್ಲೇ ವಾಸಮಾಡತಕ್ಕ ಲಂಬಾಣಿಯರು ಹರಿಜನರು, ಇರುಳಿಗರೂ 100 ಕ್ಕೆ 75–80 ಜನರು ದಿನಪ್ರತಿ ಕಾಡಿನಿಂದ ಕಟ್ಟಿಗೆಯನ್ನು ತಂದು ಮಾರಾಟ ಮಾಡಿ ಜೀವನ ಮಾಡುತ್ತಿದ್ದಾರೆ. ಹೀಗೆ ಇದು ಕೆಲವರಿಗೆ ಒಂದು ಉಪಜೀವನವಾಗಿದೆ. ಇವರಲ್ಲಿ ಅನೇಕರಿಗೆ ವ್ಯವಸಾಯ ಮಾಡಲು ಜಮೀನಿಲ್ಲ, ಬೇರೆ ಅವರಿಗೆ ಯಾವ ಉದ್ಯೋಗವೂ ಇಲ್ಲ. ಅಂಥವರಿಗೆ ಅನುಕೂಲ ಕಲ್ಪಿಸಬೇಕು. ಅಂಥವರಿಗೂ ಸಹ ತೊಂದರೆಯಾಗದಂತೆ ಈ ಮಸೂದೆಯಲ್ಲಿ ಒಂದು ಪ್ರಾವಿಷನ್ ಅಡಕ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ —ಅಧ್ಯಕ್ಷರೇ, ಈ ದಿವಸ ಇಂಥ ಒಂದು ಅರಣ್ಯ ಮಸೂದೆಯನ್ನು ನಮ್ಮ ಮಂತ್ರಿಗಳು ತಂದುದಕ್ಕಾಗಿ ನಾನು ಅವರನ್ನು ಅಭಿನಂದಿಸಬೇಕಾಗಿದೆ. ಆದರೆ ಮಂತ್ರಿಗಳು ಆಗತಕ್ಕ ಜನರು ಎಷ್ಟೋ ಆಗಿಹೋಗಿದ್ದಾರೆ. ಆಗುವವರು ಆಗುತ್ತಿದ್ದಾರೆ ಎನ್ನತಕ್ಕ ಮನೋಭಾವನೆಯಿಂದ ಈಗಿನ ಮಂತ್ರಿಗಳು ಈ ಬಗ್ಗೆ ಕಾಲಕಳೆಯದೆ ಇದರ ಕಡೆಗೆ ಹೆಚ್ಚು ಗಮನ ಕೊಡಬೇಕು. ಈ ದಿವಸ ಕೆಲವು ಗ್ರಾಮಗಳಲ್ಲಿ ಗ್ರಾಮದ ಅಜು-ಬಾಜಿರತಕ್ಕ ಪ್ರದೇಶವೆಲ್ಲ ಅರಣ್ಯಕ್ಕೆ ಸೇರಿದೆ. ಆದರಲ್ಲಿ ಹಳ್ಳಿಯ ದನಕರುಗಳು ಮೇಯಕೂಡದಂತೆ ಹೇಳಿ ಆ ಜನರನ್ನು ಬೆದರಿಸಿ ಅವರಿಂದ ಆಗಾಗ್ಗೆ ಕೊಬರಿ-ಕಾಯಿ ತೆಗೆದುಕೊಳ್ಳುತ್ತಿದ್ದಾರೆ ಕೆಲವು ಜನ ಫಾರೆಸ್ಟ್ ಇಲಾಖೆಯ ಸೇಟುಗಳು ಇದನ್ನು ತಾವು ತಪ್ಪಿಸಬೇಕು. ಆ ಹಳ್ಳಿ ಜನರು ಆ ಸೇಟುಗಳಿಗೆ ಈ ಮಾಮೂಲನ್ನು ಕೊಡದಿದ್ದರೆ ಅವರ ದನಕರುಗಳನ್ನು ದೊಡ್ಡಿಗೆ ಸೇರಿಸಿ ಅವರಿಂದ ದಂಡ ವಸೂಲ್ಮಾಡಿ ಕಿರುಕುಳ ಕೊಡುತ್ತಿದ್ದಾರೆ. ಆದುದರಿಂದ ಊರಿಗೆ ಸಮೀಪದಲ್ಲಿರುವ ಪ್ರದೇಶವನ್ನು ಆಯಾಯಾ ಊರಿಗೆ ಸೇರಿಸಿ ಅಲ್ಲಿ ಆ ಜನರೇ ಕಾಡನ್ನು ಬೆಳೆಸುವಂತೆ ಮಾಡಲು ಪ್ರಯತ್ನ ಮಾಡಬೇಕು. ಪುರಾತನ ಕಾಲದಿಂದಲೂ ಈ ಮಾಮೂಲಿ ವಸೂಲ್ಮಾಡತಕ್ಕ ಇಲಾಖೆಗಳಲ್ಲೆಲ್ಲಾ ಈ ಫಾರೆಸ್ಟ್ ಇಲಾಖೆ ಬಹಳ ಪ್ರಖ್ಯಾತಿಗೆ ಬಂದಿದೆ. ಈ ಕಾಡಿನ ವಿಚಾರದಲ್ಲಿ ಇನ್ನು ಕೆಲವು ಜನರು ಅದನ್ನು ತಮ್ಮ ಒಂದು ಸ್ವಂತ ಆಸ್ತಿಯನ್ನಾಗಿ ಮಾಡಿಕೊಂಡಿದ್ದಾರೆಂದು ಈಗಾಗಲೆ ಕೆಲವರು ಹೇಳಿದರು. ಇನ್ನು ಕಾಡನ್ನು ಹೆಚ್ಚು ಅಭಿವೃದ್ಧಿಗೆ ತರತಕ್ಕ ವಿಚಾರವಾಗಿ

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ಶ್ರೀ ಗೋಪಾಲಗೌಡರು ಬಹಳ ಚೆನ್ನಾಗಿ ಹೇಳಿದ್ದಾರೆ. ಈ ಕಾಡಿನಿಂದ ಸರ್ಕಾರಕ್ಕೆ 8 ಕೋಟಿ ರೂ.ಗಳ ಆದಾಯ ಬರುತ್ತದೆಂದು ಮಾನ್ಯ ಮಂತ್ರಿಗಳು ತಿಳಿಸಿದರು. ಆದರೆ ಇದು ನನ್ನ ಅಂದಾಜಿನಲ್ಲಿ ರೂಪಾಯಿಗೆ ಮೂರಾಣೆ ಮಾತ್ರ ಬಂದಿದೆ ಎಂತ ತಿಳಿಯುತ್ತೇನೆ. ಸರ್ಕಾರದವರು ಬಿಗಿಯಾಗಿ ಕೆಲಸ ಮಾಡಿದರೆ ಇದರಿಂದ ಬೇಕಾದಷ್ಟು ವರಮಾನ ಪಡೆಯಲು ಅವಕಾಶವಿದೆ. ಈ ದಿವಸ ಕೆಲವು ದೊಡ್ಡ ದೊಡ್ಡ ಶ್ರೀಮಂತರು ಅಲ್ಲಲ್ಲೇ ಕೆಲವು ಕೈಗಾರಿಕೆಗಳನ್ನು ಸ್ಥಾಪಿಸಿ ಈ ಕಾಡಿನಿಂದ ಹೆಚ್ಚು ಫಾಯಿದೆ ಪಡೆಯಬೇಕು ಎಂಬ ಅಂದಾಜಿನಲ್ಲಿದ್ದಾರೆಂಬ ವದಂತಿ ಕೇಳಿ ಬರುತ್ತಿದೆ. ಆದರೆ ಈ ದಿವಸ ಯಾರು ಕಾಡಿನಲ್ಲೇ ಇದ್ದು- ಆ ಕಾಡನ್ನು ಬೆಳೆಸಿರುತ್ತಾರೋ ಅಂಥಾ ಜನರಿಗೆ ಕೂಲಿ ಅನುಕೂಲ ಸಹ ಸಿಗದಂತಾಗಿದೆ. ಆದುದರಿಂದ ಈ ಕಾಡಿನ ಮರಗಳನ್ನು ಬೆಳೆಸುವ ಕೈಗಾರಿಕೆಗಳು ಯ್ಯಾವಿವೆಯೋ ಅಂಥವುಗಳನ್ನು ಆಯಾಯ ಕಾಡಿನ ಸಮೀಪದಲ್ಲೇ ಸ್ಥಾಪಿಸಿ– ಆ ಜನರಿಗೆ ಕೂಲಿ ಸೌಕರ್ಯವಾದರೂ ಸಿಗುವಂತೆ ಅವಕಾಶ ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ. ಈಗಾಗಲೇ 2-3 ದೊಡ್ಡ ಫ್ಯಾಕ್ಟರಿಗಳನ್ನು ಎಲ್ಲೋ ಸ್ಥಾಪಿಸಿ-ಅವುಗಳಿಗೆ ಈ ಮೈಸೂರು ರಾಜ್ಯದ ಕಾಡಿನಿಂದ ಮರಗಳನ್ನು ಬಳಸಬೇಕೆಂಬ ಯೋಚನೆ ಮಾಡಿಕೊಂಡು ಇದಕ್ಕೆ ಸಂಚು ಕಾಯುತ್ತಿದ್ದಾರೆಂತ ಕೇಳಿದ್ದೇನೆ. ಸರ್ಕಾರದವರು ಇದಕ್ಕೆ ಖಂಡಿತ ಅವಕಾಶ ಕೊಡಬಾರದೆಂದು ಹೇಳುತ್ತೇನೆ. ನಾನು ಈ ಸಭೆಯಲ್ಲಿ ಕಳೆದ ಆರು ವರ್ಷಗಳಿಂದಲೂ ಸದಸ್ಯನಾಗಿದ್ದೇನೆ. ಈ ಗಂಧದ ಮರದ ವಿಚಾರ ಹೇಳಬೇಕೆಂದರೆ–ಬಳ್ಳಾರಿಯವರೊಬ್ಬರು ಪ್ರತಿ ವರ್ಷವೂ ಒಂದು ಪುಸ್ತಕ ಪ್ರಿಂಟ್ ಮಾಡಿಸಿಕೊಂಡು ಏನೇನೋ ಮಾಡುತ್ತಿದ್ದಾರೆ. ಆ ಗಂಧದ ಮರಗಳೆಲ್ಲ ಎಲ್ಲಿಗೆ ಹೋಗುತ್ತವೆ, ಏನಾಗುತ್ತವೆ, ಎಲ್ಲಿ ಮಾರಾಟವಾಗುತ್ತವೆ.......

ಶ್ರೀ ಬಿ. ರಾಚಯ್ಯ.—ನಾನು ಹೇಳತಕ್ಕದ್ದರಲ್ಲಿ ಮಾನ್ಯ ಸದಸ್ಯರು ಸ್ವಲ್ಪ ನಂಬಿಕೆ ಇಡಬೇಕು. ಈಗ ಅವರು ಹೇಳಲು ಹೊರಟಿರುವ ವಿಚಾರ ಅದು ಸಬ್ ಜುಡೀಸ್ ಆಗಿದೆ. ಅದನ್ನು ಅವರು ಕೈ ಬಿಟ್ಟರೆ ಒಳ್ಳೆಯದೆಂತ ಹೇಳುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆಗಲಿ ಸ್ವಾಮಿ, ನಾನು ಹೇಳುವುದು ಸಬ್ ಜುಡೀಸಿಗೆ ಸೇರುವುದಿಲ್ಲ. ಏನೇ ಆಗಲಿ ಮಂತ್ರಿಗಳು ಉತ್ತರ ಕೊಡುವಾಗ ಈ ವಿಚಾರದಲ್ಲಿ ಸಂಪೂರ್ಣ ವಿವರಗಳನ್ನು ತಿಳಿಸಬೇಕೆಂದು ಕೇಳುತ್ತೇನೆ. ಇನ್ನು ನಮಗೆ ಬರತಕ್ಕ ಆದಾಯದ ಅರ್ಧಭಾಗ ಆ ಬಳ್ಳಾರಿ ಶಾಂತವೀರಪ್ಪ....

ಶ್ರೀ ಬಿ. ರಾಚಯ್ಯ.—ಈಗ ಅವರೂ ಹೈಕೋರ್ಟಿಗೆ ಹೋಗಿ ಒಂದು ಸ್ಟೇ ಆರ್ಡರ್ ತಂದಿದ್ದಾರೆ. ಅವರಿಗೆ ಟರ್ಮನ್ನು ಎಕ್ಸ್‌ಟೆಂಡ್ ಮಾಡುವುದಿಲ್ಲ ಎಂತ ನಾವು ಹೇಳಿದ್ದೇವೆ. ಇದೂ ಸಹ ತಾವು ಹೇಳಬಾರದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಾಗಾದರೆ ಅವರು ಮಳೆಗಾಲ ಬರುವುದಕ್ಕೆ ಮುಂಚೆ ಬೇಕಾದ ಹಾಗೆ ಇದ್ದಿಲನ್ನು ಸುಡಿಸಿಕೊಂಡು ಹೋಗುತ್ತಾರೆ. ಅದಕ್ಕಾದರೂ ಅವಕಾಶವಿಲ್ಲದಂತೆ ಸರ್ಕಾರದವರು ತಡೆಗಟ್ಟಲಿ. ಆದರೆ ಈ ವಿಚಾರದಲ್ಲಿ ಹೈಕೋರ್ಟಿನಿಂದ ರಿಕಾರ್ಡುಗಳು ಬೇಗ ಬಾರದಂತೆ ತಡೆ ಹಿಡಿಯುವಂತೆ ಇಲ್ಲಿನ ಕೆಲವು ಅಧಿಕಾರಿಗಳು ಷರೀಕಾಗಿ ಕೆಲಸ ಮಾಡುತ್ತಿದ್ದಾರಂತೆ.

ಆದ್ದರಿಂದ ಅದನ್ನು ಬಹಳ ತೀವ್ರವಾಗಿ ನಮ್ಮ ಲಾಯರುಗಳು ಹೇಳಿದ್ದಾರೆ. ನಮ್ಮ ದೇಶದ ಅರಣ್ಯ ಸಂಪತ್ತು ಹೋಗದಹಾಗೆ ಏರ್ಪಾಡು ಮಾಡಬೇಕು. ಬಯಲು ಸೀಮೆಯಲ್ಲಿ ಮರಗಳನ್ನು ಬೆಳೆಸುವ ಹಾಗೆ ಏರ್ಪಾಡು ಮಾಡಬೇಕು. ಅರಣ್ಯ ಇಲ್ಲದೆ ಇರತಕ್ಕಂಥ ಪ್ರದೇಶದ ಜಮೀನನ್ನೂ ರೈತರಿಗೆ ಕೊಟ್ಟು ಅಲ್ಲಿ ಕಾಡು ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಬಯಲು ಸೀಮೆಯಲ್ಲಿ ಕೆಲವು ಕಡೆ ಅರಣ್ಯ ಇಲಾಖೆಗೆ ಸೇರಿದ ಜಮೀನು ಇದೆ. ಅದಕ್ಕೆ ರೈತರು ದರಕಾಸ್ತು ಅರ್ಜಿ ಹಾಕಿದರೆ ಅದನ್ನು ಯಾರಿಗೂ ಕೊಡುವುದಿಲ್ಲ. ಅದರಲ್ಲಿ ಅರಣ್ಯವನ್ನು ಬೆಳೆಸುತ್ತೇವೆಂದು ಸರ್ಕಾರದವರು ಹೇಳುತ್ತಾರೆ. ಆ ಜಮೀನಿನಲ್ಲಿ ಸರ್ಕಾರದವರು ಕಾಡನ್ನೂ ಬೆಳೆಸುವುದಿಲ್ಲ. ರೈತರಿಗೂ ಕೊಡುವುದಿಲ್ಲ. ಇಂಥಾ ಪರಿಸ್ಥಿತಿಯಲ್ಲಿದೆ. ಆ ಜಮೀನನ್ನು ರೈತರಿಗಾದರೂ ಕೊಟ್ಟರೆ ಅದರಲ್ಲಿ ಹೆಚ್ಚು ಆಹಾರವನ್ನು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಮಾನ್ಯ ಅರಣ್ಯ ಶಾಖಾ ಮಂತ್ರಿಗಳು ಅಂಥಾ ಜಮೀನನ್ನು ರೈತರಿಗೆ ಕೊಟ್ಟು ಒಳ್ಳೆಯ ಹೆಸರನ್ನು ಪಡೆಯುವಂತೆ ಮಾಡುತ್ತಾರೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† Sri B. P. KADAM (Karwar).—Sir, the Hon'ble Minister for Forests has brought in a Bill which is primarily meant to consolidate all the necessary provisions prevailing in the various parts of the State. in his preliminary speech, the Hon'ble Minister was good enough to make a reference to the grandeur of forests, that forests have existed right from the days of Adam. It is true that forests have been there without habitation even before the advent of man and all experts agree with the view. When exhorting the position of forests, he ought to have stressed in his speech that forests are necessary for the use of man and mankind. In other words the forest Department should not only serve the race, but it must be there to serve the entire population, particularly the sphere of agriculture. That is lacking is his speech. In this Bill, certain provisions are there to have almost all the powers

in the hands of the State Government disregarding all the officers of the Agricultural Department or the agriculturists generally. Sir, when nobody would question the necessity of a Forest Department and that the Forest Department should yield more revenue, a stage has now come when forest revenue can be further increased and agriculture can also be helped to grow steadily. Unfortunately, the Forest Department treats Agriculturists with a degree of vengence. In the various districts since immemorial times so many facilities have been granted to the agriculturists for timber for constructing their houses, for agricultural implements, for constructing cattle-sheds, for getting leaves for manure purposes etc. These facilities are not afforded to the agriculturists now-a-days. In fact, agriculturists must be very enthusiastic and food production must grow. If the Agriculturists are cribbled, how is it possible for them to go ahead to work better and yield greater food stuffs? That is a straight question I would ask. In North Kanara, forest rules were in existence where people were granted house plots for horticultural purposes and for indiscriminate use of the Forest Department also. The forests are as barren as the human palm itself. When Agriculturists ask for 5 guntas for agricuitural purposes, they are asked to put in an application for 20 guntas and more and not less than that. Whenever the poor Agriculturist ask for five guntas, he is offered less than 10 guntas and they would quote the provisions of fragmentation of Holdings Act. Since 1961, there have been great floods and people are asking for house plots and the Department is unwilling to give even five guntas. There have been serious agitations and the Forest Department is sitting with folded hands on the heads of agriculturists itself. How is it possible to construct a house within an area of two and quarter guntas and have a court yard for seed paddy, boiled paddy, haystack and cattle shed? Therefore, I appeal to the Minister to look into the matter and treat the agriculturist with a degree of sympathy so that he will be of help to grow more food. He should not be looked upon with vengeance, but he must be treated as a ryot. The Hon'ble Minister said that the forests are noble things. He has not made a mention of the great difficulty that the agriculturist faces at the hands of the wild animals. I tried to follow the provisions of the existing Bill. I cannot agree totally. There are wild animals existing in the forests, which are stated to be protected. What would be the measure Government intend to take to avoid wild animals encroaching in the fields or areas cultivated or areas which are got on? Sir, in a place like North Kanara, three to four hundred cattle suffer at the hands of cattle-lifters, Panthers, Tigers, etc., each year. That means cattle lifting amounts to about three thousand in the North Kanara District itself. I want to ask a plain question to the Hon'ble Minister as to what are the provisions in his Bill which he has in view to curtail the menace of cattle-lifters? In addition, there is the trouble of the Jackals, Wild Cats and Monkeys, which are in abundance. The forest Bill as it is and the provisions of various rules as they are, go to protect wild animals, but they do not go to protect the human-beings themselves. Therefore, unless steps are taken in right earnest, there will be severe agitation in the North Kanara. On account of the emergency, the agitation has been almost suspended, because any amount of agitation is bound to be held down under the Defence of India Rules.

(SRI B. P. KADAM).

But immediatly the emergency is over, I assure the Hon'ble Minister that a severe agitation is in store. I would earnestly urge upon him to be sympathetic and farsighted and see that the various demands of the agriculturists are met speedily and in right earnest.

5-00 P. M.

Further, I would urge upon the Hon'ble Minister to take a tour of the North Kanara District and contact the various social workers and Taluk Boards and representatives of village panchayats and understand their grievances so far as forests are concerned and be in right earnest to solve them. Certain provisions are there to check certain excesses at the hands of the forest officers and so on. The Government's zeal to collect more revenue is quite understandable and it should be supported by everybody. I would like to request the Hon'ble Minister to have a provision in the Bill itself by which the income of a forest officer may be assessed not only his income but the income of all the relatives of the forest officer. My experience is---forest officers are invariably very corrupt. They not only connive but abet many offences. Forest officers like romantic generals move in vehicles and kill wild animals which should be protected and being abetter and connivers with so many forest contractors, amass so much wealth which amounts to several lakhs. If the nefarious activities of the forest officers are checked, I am sure forest revenue of the State will increase by 30 per cent. Therefore, these forest officers' activities must be supervised not only by the Department but also through the local police intelligentia. Then there will be hope. Otherwise within the next period of 50 years forest revenue will go on deceasing and a stage will come when the Forest Department will be there without any forest itself. All the revenues will go to the pockets of the forest officers. The provisions in this Act under which so much power is sought to be delegated is taken away from this piece of legislation. It is very unfortunate to say that the Government want to curtail so much power which otherwise should be provided for in the Act itself. Therefore, I would request the Hon'ble Minister to see that in the Select Committee many of the provisions are suitably brought out in the Act itself and not to be curtailed or snatched away from the provisions of the Bill itself because under the cover of the Act so many things may be done since very few people read the Act. I do not wish to take further time. I express for the latitude that has been shown to me and resume my seat.

Sri C. J. MUCKANNAPPA.—Can a Lady Member go round in the House with a bundle of currency notes ?

MR. DEPUTY SPEAKER.—I do not see anything wrong.

ಶ್ರೀ ಡಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಸ್ವಾಮಿ ಈ ಅರಣ್ಯ ಇಲಾಖೆಗೆ ಸಂಬಂಧಪಟ್ಟ ಕಾಯಿದೆಯನ್ನು ಸಮರ್ಥನೆ ಮಾಡುತ್ತಾ ನಾನು ಕೆಲವು ವಿಷಯಗಳನ್ನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ನಮ್ಮ ಶಿವಮೊಗ್ಗ ಜಿಲ್ಲೆ ಬಹಳ ಅರಣ್ಯ ಇರತಕ್ಕ ಪ್ರದೇಶ. ಕಾಡು ಇವತ್ತಿನ ದಿವಸ ಹಾಳಾಗುತ್ತಾ ಇದೆ. ಆದರ ದೆಸೆಯಿಂದ ಹೊಸ ಹೊಸದಾಗಿ ಪ್ಲಾಂಟೇಷನ್‌ಗಳನ್ನು ಮಾಡಬೇಕು ಎನ್ನುವ ಉದ್ದೇಶದಿಂದ ಒಂದು ಯೋಜನೆಯನ್ನು ಸರ್ಕಾರ ಹಾಕಿಕೊಂಡು ಹೊಸದಾಗಿ ಗಿಡಗಳನ್ನು ಬೆಳೆಸುವ ಬಗ್ಗೆ ಬೇಕಾದಷ್ಟು ಹಣ ಖರ್ಚು ಮಾಡುತ್ತಾ ಇದೆ. ಎಷ್ಟೇ ಹಣ ಖರ್ಚು ಮಾಡಿ ಗಿಡಗಳನ್ನು ಬೆಳೆಸಿದರೂ ಕೂಡ ಕಾಡು ಇವತ್ತಿನ ದಿವಸ ಮಾಯವಾಗುತ್ತಾ ಇದೆ. ಹೇಗೆ ಹೋಗುತ್ತಾ ಇದೆ? ಯಾರಿಂದ ಹೋಗುತ್ತಾ ಇದೆ? ಯಾವುದರ ಬಗ್ಗೆ ಹೋಗುತ್ತಾ ಇದೆ ಎನ್ನುವುದರ ಬಗ್ಗೆ ಮಾನ್ಯಮಂತ್ರಿಗಳು ಸ್ವಲ್ಪಹೆಚ್ಚಿನದಾಗಿ ವಿಮರ್ಶೆ ಮಾಡಬೇಕಾಗಿದೆ. ಇವತ್ತು ಕಾಡು ಹೋಗಬೇಕಾದರೆ ಕಾರಣ ಕಳ್ಳ ಸಾಗಾಣಿಕೆ ಮಾಡಿಕೊಂಡು ಹೋಗುತ್ತಾ ಇರತಕ್ಕ ಜನ ದೇಶದಲ್ಲಿ ಇದ್ದಾರೆ. ಅದನ್ನು ತಡೆಗಟ್ಟಲು ಸರ್ಕಾರದವರು ಅಧಿಕಾರಿಗಳನ್ನು ಕೂಡ ನೇಮಕ ಮಾಡಿದ್ದಾರೆ. ಈಗ ಏನಾಗಿದೆ ಎಂದರೆ ಲಂಚದ ಹಾವಳಿ ಜಾಸ್ತಿಯಾಗಿದೆ.

ಕಾಡಿಗೆ ಹೋಗಿ ಬರತಕ್ಕ ಮನುಷ್ಯ ಅವನ ಜೋಬಿನಲ್ಲಿ ಒಂದೊಂದು ನೂರು ರೂಪಾಯಿ ನೋಟುಗಳ ಕಂತೆಯನ್ನೇ ತೆಗೆದುಕೊಂಡು ಹೋಗುತ್ತಾನೆ. ಕಳ್ಳ ಸಾಗಾಣಿಕೆಯಿಂದ ಮರಗಳು ಸಾಗಿ ಹೋಗುವುದನ್ನು ಪತ್ತೆ ಹಚ್ಚಿದಾಗ, ಯಾರು ಅದಕ್ಕೆ ಸಂಬಂಧ ಪಟ್ಟವರೋ ಅವರನ್ನು ಹಿಡಿದುಕೊಂಡು ಬಂದು ಇದು ನಮ್ಮ ದೇಶದ ಸ್ವತ್ತು ಅವರು ಮಾಡುತ್ತಾ ಇರುವುದು ಅನ್ಯಾಯ, ನಾನು ಸರ್ಕಾರಿ ನೌಕರನಾಗಿ ಸರ್ಕಾರದ ಉಪ್ಪು ತಿಂದು ಸರ್ಕಾರದ ಸೇವೆ ಮಾಡಬೇಕು ಎನ್ನುವುದನ್ನು ಮರೆತು ಅವರಿಗೆ ಶಿಕ್ಷೆ ಮಾಡದೇ ಹಸುರು ನೋಟು ಕೊಟ್ಟ ಕೂಡಲೇ ಯಾವ ಸಾಮಿಲ್ಲಿಗೆ ಹೋಗಬೇಕೋ ಆ ಸಾಮಿಲ್ಲಿಗೆ ಗಾಡಿಯನ್ನು ಸಾಗಿಸತಕ್ಕ ವ್ಯವಸ್ಥೆಯೂ ಕೂಡ ಉಂಟು. ಉದಾಹರಣೆಗೆ ಹೇಳುವುದಾದರೆ ಉಂಬಳಿ ಬಯಲು ಫಾರೆಸ್ಟ್‌ನಲ್ಲಿ ಲಕ್ಕನತೋಪಿನ ಹತ್ತಿರ ಗಂಧದ ಮರದ ನಾಟಾ ಸಾಗಿಸುತ್ತಿದ್ದುದನ್ನು ಪೋಲೀಸ್‌ನವರು ಆಕಸ್ಮಾತ್ತಾಗಿ ಕಳ್ಳ ಭಟ್ಟಿ ಸಾರಾಯಿ ಮಾಡುತ್ತಿದ್ದುದನ್ನೂ ಹಿಡಿಯಬೇಕೆಂದು ಹೋದ ಸಂದರ್ಭದಲ್ಲಿ ಪತ್ತೆಹಚ್ಚಿ ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ. ಅದು ಹೈದರಾಬಾದ್ ಸ್ಟೇಟಿಗೋ ಅಥವಾ ಇನ್ನೆಲ್ಲಿಗೋ ಹೋಗುತ್ತಾ ಇತ್ತು ಎಂಬ ವಿಚಾರವನ್ನು ನಾನು ತಿಳಿದುಕೊಂಡಿದ್ದೇನೆ.

ಇನ್ನೊಂದು ವಿಷಯವನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ನಮ್ಮ ಜಿಲ್ಲೆಯಲ್ಲಿ ಕಾಡಿಗೆ ಸೇರದೇ ಇರತಕ್ಕ ಕೆಲವು ಪ್ರದೇಶ ಇದೆ. ಶ್ರೀಮಾನ್ ಕಡಿದಾಳು ಮಂಜಪ್ಪನವರೂ ಕೂಡ ಹೇಳಿದ್ದಾರೆ. ಆ ಪ್ರದೇಶವನ್ನೆಲ್ಲಾ ರೈತರಿಗೆ ವ್ಯವಸಾಯಕ್ಕಾಗಿ ಕೊಡಿ ಎಂದು ಹೇಳುತಿಲ್ಲ. ವಿನಾಃ ಕಾರಣ ನೀವು ಉಪಯೋಗಿಸದೇ, ರೈತ ಸಾಗುವಳಿ ಮಾಡುವುದಕ್ಕೆ ಕೊಡದೇ ಇಟ್ಟುಕೊಂಡಿರುವುದು ಸರಿಯಲ್ಲ. ಅಸಲಿಕಟ್ಟೆ, ಉಪ್ಪುಗುಂದ, ಮಾವಿನಕರೆ ಈ ಪ್ರದೇಶದಲ್ಲಿ ಕಾಡಿಗೆ ಉಪಯೋಗ ಮಾಡದೇ ಇರತಕ್ಕ ಭೂಮಿಯನ್ನು ತಕ್ಷಣ ಸಾಗುವಳಿಗೆ ಕೊಡುವಂಥ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಮಲೆನಾಡಿನಲ್ಲಿ ರೈತರಿಗೆ ಅವರವರ ಸಂಸಾರಕ್ಕೆ ತಕ್ಕ ಹಾಗೆ ಮಾಫಿಪಾಸುಗಳನ್ನು ಕೊಡುತಿದ್ದರು, 5-6ಗಾಡಿ ಹಸಿಸೌದೆ ಕಡಿದುಕೊಂಡು ಬರಲು ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಚನ್ನಗಿರಿ ತಾಲ್ಲೂಕು ಬಿಟ್ಟು ಇತರ ಭಾಗಗಳವರಿಗೆ ಅವಕಾಶ ಕೊಡುತ್ತಿದ್ದರು. ಈಗ ಅದನ್ನು ನಿಲ್ಲಿಸಿದ್ದಾರೆ. ದಯೆಯಿಟ್ಟು ಅದನ್ನು ಕೊಡುವಂತೆ ವ್ಯವಸ್ಥೆ ಮಾಡಬೇಕು.

ಇನ್ನೊಂದು ಮುಖ್ಯ ವಿಚಾರ, ರೈತರು ವ್ಯವಸಾಯದ ಉಪಕರಣಗಳಿಗಾಗಿ ಕಾಡಿಗೆ ಹೋಗಲೇಬೇಕು. ನೇಗಿಲು ಕುಂಟೆ ಮುಂತಾದುವುಗಳಿಗೆ ಬೇಕಾದ ಮರತರಲು ಹೋಗುತ್ತಾರೆ. ಆದರೆ ಮರಮುಟ್ಟು, ವ್ಯವಸಾಯಕ್ಕೆ ಸಂಬಂಧಪಟ್ಟ ಸಾಮಾನು ತಂದರೆ ಅವರನ್ನು ತಡೆಯುತ್ತಾರೆ. ಏಕೆಂದರೆ ಅವರು ಲಂಚ ಕೊಡುವುದಿಲ್ಲ. ಇದರಿಂದ ತೊಂದರೆಯಾಗುತ್ತಿದೆ. ಅಪರಾಧ ಕೊಡದಿದ್ದರೂ ದಂಡ ವಿಧಿಸುತ್ತಾರೆ. ಆದುದರಿಂದ ರೈತರಿಗೆ ಬೇಕಾದ ಸಾಮಾನುಗಳು ಯಾವುದಾದರೂ ಡಿಪೋದಲ್ಲಾದರೂ ಸಿಕ್ಕುವಹಾಗೆ ಏರ್ಪಾಡು ಮಾಡಿ ರೈತರಿಗೆ ಅನ್ಯಾಯವಾಗಿ ಕೋರ್ಟಿನಲ್ಲಿ ದಂಡ ಬೀಳುವುದನ್ನು ತಪ್ಪಿಸಬೇಕು ಎಂದು ಹೇಳಿ ನನ್ನ ಭಾಷಣ ಮುಕ್ತಾಯ ಮಾಡುತ್ತೇನೆ.

†ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಈ ಮಸೂದೆಯ ಉದ್ದೇಶ "to prevent private owners from recklessly exploiting", ಅಂದರೆ ವನಸಂಪತ್ತು ಹಾಳಾಗುವುದನ್ನು ತಡೆಗಟ್ಟುವುದು ಎಂದು ಉದ್ದೇಶ ಮತ್ತು ಕಾರಣಗಳ ವಿವರದಲ್ಲಿ ತಿಳಿಸಿದ್ದಾರೆ. ಇದು ಬಹಳ ಸ್ವಾಗತಾರ್ಹವಾದುದು. ಆದರೆ ಇದಕ್ಕೆ ಹಾಕಿಕೊಂಡಿರುವ ಕಾರ್ಯಕ್ರಮದಿಂದ ಈ ಉದ್ದೇಶ ನಿಜವಾಗಿಯೂ ನೆರವೇರುತ್ತಿದೆಯೇ ಎಂದು ಪರೀಕ್ಷೆ ಕೊಡಬೇಕಾದ್ದು ಸೂಕ್ತ ಎಂದು ಕಾಣುತ್ತದೆ. ಈ ಬಗ್ಗೆ ಹಾಕಿಕೊಂಡಿರುವ ಕಾರ್ಯಕ್ರಮ, ಒಂದನೆಯದು ಪೆನಾಲ್ಟಿ ವಿಧಿಸುವುದು, ಎರಡನೆಯದು ಸರ್ಕಾರದ ಸ್ವತ್ತು ಎಂದು ಡಿಕ್ಲೇರ್ ಮಾಡುವುದು, ಇನ್ನೊಂದು ಸ್ವಂತ ಉಪಯೋಗದ ವಿಚಾರ ಡೊಮೆಸ್ಟಿಕ್‌ಯೂಸ್. ಗಂಧದ ಮರವನ್ನು ಏಳು ಪೌಂಡುಗಳವರೆಗೆ ಮನೆಯಲ್ಲಿಟ್ಟುಕೊಂಡಿರಬಹುದು, ಅದಕ್ಕಿಂತ ಹೆಚ್ಚಾಗಿರುವುದನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂದು ಹೇಳುತ್ತಾರೆ. 374ನೇ ಪುಟದಲ್ಲಿ ಪೆನಾಲ್ಟಿ ವಿಚಾರ ನಮೂದಾಗಿದೆ. ಗಂಧದ ಮರದ ಎಲೆ ಅಥವಾ ಕೊನೆಗಳು ಮುಂತಾದ್ದನ್ನು ಯಾರಾದರೂ ಕಿತ್ತು 10-12 ಟನ್ನುಗಳಷ್ಟನ್ನು ಲಾರಿಯಲ್ಲಿ ಸಾಗಿಸುತ್ತಿದ್ದರೆ ಎರಡು ವರ್ಷ ಸಜಾಶಿಕ್ಷೆ, ಎರಡುಸಾವಿರ ರೂಪಾಯಿಗಳ ಜುಲ್ಮಾನೆ ವಿಧಿಸಲು ಅವಕಾಶ ಕಲ್ಪಿಸಲಾಗಿದೆ. ಆದರೆ ಹತ್ತು ಟನ್ ಸಿಕ್ಕಿದರೆ ಹತ್ತುಸಾವಿರ ರೂಪಾಯಿ ದೊರೆಯುತ್ತದೆ, ಆಕಸ್ಮಾತ್ ಸಿಕ್ಕಿದರೆ ಎರಡುಸಾವಿರ ರೂಪಾಯಿ ಖರ್ಚಾದರೂ ಆಗಲಿ ಎಂದು ಕೆಲವರು ಸ್ಮಗಲ್ ಮಾಡಲು ಸಿದ್ಧವಾಗಿರುತ್ತಾರೆ. ಆದುದರಿಂದ ಇಷ್ಟು ಪೆನಾಲ್ಟಿ ಸಾಲದು. where they are trying to take it away in a lorry load, the penalty should go up to 50,000 rupees. ಇಲ್ಲದಿದ್ದರೆ ಡೆಟರೆಂಟ್ ಆಗುವುದಿಲ್ಲ. ತಪ್ಪುಮಾಡುವವರಿಗೆ ಉತ್ತೇಜನ ಕೊಟ್ಟಂತಾಗುತ್ತದೆ.

ಮನೆ ಉಪಯೋಗಕ್ಕೆ, ದೇವಸ್ಥಾನದಲ್ಲಿ ಗಂಧ ಅರೆಯುವುದಕ್ಕೆ 15-20 ಪೌಂಡಿನ ಗಂಧದ ಕೊರಡನ್ನು ತಂದುಕೊಳ್ಳುವುದುಂಟು. ಆ ಪ್ರಮಾಣವನ್ನು 25 ಪೌಂಡ್ ವರೆಗೆ ಹೆಚ್ಚಿಸುವುದು ಒಳ್ಳೆಯದು.

ಸ್ಪೈಕ್‌ರೋಗವು ಒಂದು ತರಹ ವೈರಸ್ ರೋಗ. ಅದು ಬರುತ್ತಿರುವುದರಿಂದ ಗಂಧದ ಮರಗಳನ್ನು ಹೊಸದಾಗಿ ಬೆಳೆಸುತ್ತಿಲ್ಲವೆಂದು ಕೇಳಿದ್ದೇನೆ. ಆ ರೋಗ ಬಂದರೆ ಮರ ಬೆಳೆಯುವುದಕ್ಕೆ ಮುಂಚೆ ಒಣಗುತ್ತದೆ. ವೈರಸ್ ರೋಗ ಸರ್ವೆಮರ ಮತ್ತು ಗಂಧದ ಮರ ಇವೆರಡಕ್ಕೂ ತಗಲುತ್ತದೆ.

ಗಂಧದ ಮರದಿಂದ ಬಹಳ ಹಣ ಬರುವುದರಿಂದ ಈ ರೋಗ ಬಾರದಂತೆ ತಡೆಗಟ್ಟಲು ಮುಖ್ಯವಾಗಿ ಗಮನ ಕೊಡಬೇಕು. ಮಧ್ಯಪ್ರದೇಶ ಮುಂತಾದ ಕಡೆ ಗಂಧದ ಮರ ಬಲವಾಗಿ ಬೆಳೆದರೂ ಅದರಲ್ಲಿ

(ಶ್ರೀ ವಿ. ಎಂ. ದೇವ್)

ಮೈಸೂರಿನ ಮರದಲ್ಲಿರುವಂತೆ ಗಂಧವಿರುವುದಿಲ್ಲ. ಆ ದೃಷ್ಟಿಯಿಂದ ನಮ್ಮ ದೇಶದಲ್ಲಿ ಗಂಧದ ಮರಗಳು ಹಾಳಾಗದಂತ ಎಚ್ಚರಿಕೆ ವಹಿಸುವುದು ಅಗತ್ಯ. ನಮ್ಮ ಊರಿನ ಹತ್ತಿರವೂ ಗಂಧದ ಗಿಡಗಳು ಬೆಳೆಯುತ್ತವೆ. ಅವು ಚೆನ್ನಾಗಿ ಬೆಳೆಯಬೇಕಾದರೆ ಅದಕ್ಕೆ ಬರುವ ರೋಗವು ಎಲ್ಲಿ ಉತ್ಪತ್ತಿಯಾಗುತ್ತದೆಂಬುದನ್ನು ನೋಡಬೇಕು. ಅದು ಹಳೆಯ ಮೈಸೂರಿನಲ್ಲಿ ಪ್ರಾರಂಭವಾಗಿ ವಿಶಾಲ ಮೈಸೂರು ಮತ್ತು ಆಂಧ್ರಕ್ಕೆ ಹರಡುತ್ತಿದೆ. ಇವನ್ನು ತಡೆಗಟ್ಟಲು ಒಂದೆರಡು ಸಲಹೆ ಕೊಡುತ್ತೇನೆ. ರೋಗದ ಮೂಲ ಹಳೆಯ ಮೈಸೂರಿನಲ್ಲಿರುವುದರಿಂದ ರಿಸರ್ಚ್ ಮತ್ತು ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಅಲ್ಲಿರಬೇಕಾದ್ದು ಅವಶ್ಯಕ. ಮನುಷ್ಯನಿಗೆ ಮ್ಯಾಲ್‌ನ್ಯೂಟ್ರಿಷನ್‌ನಿಂದ ರೋಗ ಬರುವ ಹಾಗೆ ಗಂಧದ ಮರಕ್ಕೂ ಬರುತ್ತದೆ. ಮ್ಯಾಲ್‌ನ್ಯೂಟ್ರಿಷನ್ ಈ ಮರಕ್ಕೆ ತಗುಲುವ ರೋಗಕ್ಕೆ ಮುಖ್ಯ ಕಾರಣ. ನನ್ನದು ಒಂದು ಸರ್ವೆ ಪ್ಲಾನ್‌ಟೇಷನ್ ಇದೆ. ತಗ್ಗು ಭೂಮಿಯಿರುವ ಕಡೆ ಎಲ್ಲಾ ಕಡೆ ರೋಗ ಬರುವಂತೆ ವೈರಸ್ ರೋಗ ಬಂತು. ಚೆನ್ನಾಗಿ ಮಳೆ ಬಂದಮೇಲೆ ಆ ರೋಗ ಹೋಯ್ತು. ಅರಣ್ಯದಲ್ಲಿರುವ ಮರಗಳು ಹೋಗಿ ವನಪ್ರದೇಶ ಕಡಮೆಯಾಗಿರುವುದರಿಂದ ರೋಗಕ್ಕೆ ಅವಕಾಶವಾಗಿದೆ. ರೋಗ ಬಂದರೆ ಅದನ್ನು ತಡೆಗಟ್ಟಲು ಏನಾದರೂ ಕಂಡುಹಿಡಿಯದೆ ಗಂಧದ ಮರವನ್ನೇ ಬೆಳೆಸುವುದನ್ನು ನಿಲ್ಲಿಸುವುದು ಸರಿಯಲ್ಲ. ಪೂರ್ವದಲ್ಲಿ ಮನುಷ್ಯರು ಪ್ರವೇಶಮಾಡಲು ಸಾಧ್ಯವಿಲ್ಲದಷ್ಟು ದಟ್ಟವಾದ ಮಹಾಕಾಡುಗಳು ಬೆಳೆದಿದ್ದವು. ಅದರಂತೆ ಈಗಲೂ ಬೆಳೆಸಲು ಪ್ರಯತ್ನಿಸಬೇಕು. ಗಿಡ ಬೆಳೆಸಲು ಟ್ರೆಂಚ್ ಹೊಡೆದು, ಬೀಜ ಹಾಕಿ, ಸಾಕಾದಷ್ಟು ಗೊಬ್ಬರ ವಗೈರೆ ಆಹಾರ, ಗಿಡಕ್ಕೇನು ಬೇಕೋ ಅದನ್ನು ಹಾಕಿದರೆ ಮುಕ್ಕಾಲುಪಾಲು ಈ ರೋಗ ಬರುವುದಿಲ್ಲವೆಂದು ಕಾಣುತ್ತದೆ. ಹಾಗೆ ಮಾಡಬೇಕು. ಹೇಗಾದರೂ ಖಂಡಿತ ಗಂಧದ ಮರಗಳನ್ನು ಹೆಚ್ಚಾಗಿ ಬೆಳೆಸಬೇಕು.

ಇನ್ನೊಂದು, ಸಣ್ಣ ಸಣ್ಣ ಗಂಧದ ಸೊಸಿಗಳು ಹುಟ್ಟಿದ ಕೂಡಲೆ ಕೆಲವರು ಕಿತ್ತು ಹಾಕುತ್ತಾರೆ. ಈಗ ನಾಮಿನಲ್ ಅಮೌಂಟ್ ಕೊಡುವುದರಿಂದ ಜನರು ತಮ್ಮ ಜಮೀನುಗಳಲ್ಲಿ ಗಂಧದ ಮರಗಳ ಬೆಳವಣಿಗೆಗೆ ಅಷ್ಟಾಗಿ ಗಮನ ಕೊಡುತ್ತಿಲ್ಲ. ಗಂಧದಮರ ಬೆಳೆದು ದೊಡ್ಡದಾಗಲು 40-50 ವರ್ಷಗಳ ಕಾಲ ಬೇಕು. ಅಷ್ಟು ಕಾಲ ಅದನ್ನು ಕಾಪಾಡಿದರೆ ಅದಕ್ಕೆ ಕೊಡುವುದು ಟನ್ನಿಗೆ ಎಂಟಾಣೆ ಮಾತ್ರ. ಇದರಿಂದ ಜನರು ಆಕರ್ಷಿತರಾಗದೆ ಗಿಡಗಳನ್ನು ಹಾಳುಮಾಡುತ್ತಿದ್ದಾರೆ. ಆದುದರಿಂದ ಕನಿಷ್ಠಪಕ್ಷ ಮಾರ್ಕೆಟ್ ಬೆಲೆಯ ಶೇಕಡ 70 ರಷ್ಟಾದರೂ ಕೊಡಲು ವ್ಯವಸ್ಥೆ ಮಾಡಬೇಕು. ಇದರಿಂದ ಸರ್ಕಾರಕ್ಕೆ ನಷ್ಟವಾಗುವುದಿಲ್ಲ. ಏಕೆಂದರೆ, ಖಾಸಗಿ ಜನರಿಂದ ಬರುವುದು ಸಾಮಾನ್ಯವಾಗಿ ಕಡಮೆ, ಸರ್ಕಾರಿ ಫಾರೆಸ್ಟ್‌ಗಳಿಂದ ಹೆಚ್ಚು ಬರುತ್ತಿದೆ. ಇದುವರೆಗೆ ಪ್ರತಿವರ್ಷವೂ forest produce ಹರಾಜು ಹಾಕುತ್ತಿದ್ದಾರೆ. ಐದು ವರ್ಷಕ್ಕೊಂದು ಸಾರಿ ಹರಾಜು ಹಾಕುವಂತೆ ನಿಬಂಧನೆ ಮಾಡಬೇಕು. ಟ್ರೆಂಚ್‌ಗಳನ್ನು ಹೊಡೆಯಬೇಕು. ನಾಲ್ಕು ವರ್ಷದ ಬೆಳೆಯನ್ನು ಐದನೆಯ ವರ್ಷದಲ್ಲಿ ಕೊಡುವುದರಿಂದ, ಅತ್ಯಂತ ಹೆಚ್ಚಿನ ಬೆಲೆಗೆ ಕೊಟ್ಟರೆ ಲಾಭದಾಯಕವಾಗುತ್ತದೆ. ಹಳ್ಳದಲ್ಲಿ ನಿಂತು ಇಂಗುವುದರಿಂದ yield ಮೂರು ಪಟ್ಟು ಜಾಸ್ತಿಯಾಗುತ್ತದೆ. ಈ ದೃಷ್ಟಿಯಿಂಡ ಒಟ್ಟಿನಲ್ಲಿ ಐದು ವರ್ಷದ ಗುತ್ತಿಗೆ ಪ್ರಕಾರ ಒಳ್ಳೆಯ ಬೆಲೆಯನ್ನು ನಿಗದಿಮಾಡಬೇಕು. ಒಳ್ಳೆಯ ಬೀಜ ಬಿತ್ತಬೇಕು.

ಕೊನೆಯದಾಗಿ, ಪ್ರತಿಯೊಂದು ಕಡೆಯೂ ಕುರಿ ಮೇಕೆಗಳು ಜಾಸ್ತಿಯಾಗಿವೆ. ಇವು ಹಳ್ಳಿಯವರ ಜೀವನಾಧಾರ. ಆದುದರಿಂದ ಪ್ರತಿಯೊಂದು ಫಾರೆಸ್ಟಿನ ಅಂಚಿನಲ್ಲಿಯೂ, ಸೀಮೆತಂಗಡಿ, ಹೊಂಗೆ, ಇವುಗಳನ್ನು ಹಾಕಬೇಕು. ಇವೆಲ್ಲಕ್ಕಿಂತ ಗ್ಲೈಸಿರಿಡಿಯ ಬಹಳ ಒಳ್ಳೆಯದು. ಹೊಂಗೆ ಹಾಕಿದರೆ ಜನ ಕಿತ್ತುಕೊಂಡು ಹೋಗುತ್ತಾರೆ. ಗ್ಲೈಸಿರಿಡಿಯಾ ಹಾಕಿದರೆ ಕುರಿ ಮೇಕೆ ತಿನ್ನಬಹುದು.

Sri M. C. BASAPPA (Chamarajanagar).—There are three varieties of forests in the State, namely, State Forests, District Forests and Village Forests. From the Bill it looks that District Forests seem to be the concern of neither the State nor the Village. So, I request the Minister to see that that Chapter is deleted and the district forests are added either to the State forests or to the Village forests.

†ಶ್ರೀ ಬಿ. ರಾಚಯ್ಯ.—ಸ್ವಾಮಿ, ಈ ಮಸೂದೆಯ ಮೇಲೆ ಮಾತನಾಡಿದ ಮಾನ್ಯ ಸದಸ್ಯರೆಲ್ಲರೂ ಬಹಳ ಉಪಯುಕ್ತ ಸಲಹೆಗಳನ್ನು ಕೊಟ್ಟದಕ್ಕಾಗಿಯೂ ಮತ್ತು ಅರಣ್ಯಕ್ಕೆ ಸಂಬಂಧಪಟ್ಟ ಈ ಕಾನೂನು ಪರಿಪಕ್ವವಾಗುವ ರೀತಿಯಲ್ಲಿ ಸಹಾಯ ಮಾಡಿದುದಕ್ಕಾಗಿಯೂ ಅವರೆಲ್ಲರಿಗೂ ನಾನು ಮೊದಲು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈಗ ಮಾತನಾಡಿದ ಮಹನಿಯರೆಲ್ಲರೂ ಅರಣ್ಯ ಸಂಪತ್ತನ್ನು ಉಳಿಸಿಕೊಂಡು, ಬೆಳೆಸಿಕೊಂಡು ಹೋಗಬೇಕು, ಮನುಷ್ಯನ ಜೀವನದಲ್ಲಿ ಏನೇನು ಬೇಕಾಗಿದೆಯೋ ಅವೆಲ್ಲವೂ ಅರಣ್ಯ ಸಂಪತ್ತಿನಿಂದ ಬರಬೇಕಾಗಿದೆ, ಆಹಾರ ಪದಾರ್ಥಗಳಾಗಲೀ, ನಿತ್ಯ ಜೀವನಕ್ಕೆ ಬೇಕಾದ ಸಲಕರಣೆಗಳಾಗಲೀ, ಕೈಗಾರಿಕೆಗಳಿಗೆ ಬೇಕಾದ ವಸ್ತುಗಳಾಗಲೀ ಇವೆಲ್ಲವನ್ನೂ ಪಡೆಯಲು ನಾವು ಅರಣ್ಯ ಸಂಪತ್ತನ್ನು ಬೆಳೆಸಿಕೊಂಡು ಬರಬೇಕೆಂದು ತಿಳಿಸಿದ್ದಾರೆ. ನಾನು ಮೊದಲೇ ಹೇಳಿದ ಹಾಗೆ, ಇದು ಮನುಷ್ಯನ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸುವ ಸಾಧನ ಮಾತ್ರವಲ್ಲದೆ ಅವನ ನೈತಿಕ ಮಟ್ಟವನ್ನೂ ಹೆಚ್ಚಿಸಿ ಆತನ ಮೇಲೆ ಒಳ್ಳೆಯ ಪ್ರಭಾವವನ್ನು ಬೀರುವ ಪ್ರಕೃತಿಯ ವಸ್ತುವಾಗಿದೆ. ಆದುದರಿಂದ ಅರಣ್ಯ ಸಂಪತ್ತನ್ನೂ ಅದರ ಪ್ರಾಮುಖ್ಯತೆಯನ್ನೂ ಹೆಚ್ಚು ಗಮನಿಸಬೇಕಾಗಿದೆ. ಈ ವಿಷಯದಲ್ಲಿ ಮಾತನಾಡುತ್ತಾ ಮಲೆನಾಡಿನಿಂದ ಬಂದಿರತಕ್ಕ ಮಾನ್ಯ ಸದಸ್ಯರು, ಯಾವ ರೀತಿಯಲ್ಲಿ ಈಗ ಕಾಡುಗಳು ಹಾಳಾಗುತ್ತಿವೆ, ಅವುಗಳನ್ನು ಹೇಗೆ ಸಂರಕ್ಷಣೆ

ಮಾಡಿ ಬೆಳೆಸಿಕೊಂಡು ಹೋದರೆ ಈ ದೇಶದಲ್ಲಿ ವನ ಸಂಪತ್ತು ಹೆಚ್ಚು ಸಮೃದ್ಧವಾಗಿ ಬೆಳೆದು ನಮ್ಮ ಆರ್ಥಿಕ ಸಂಪತ್ತನ್ನು ಹೆಚ್ಚಿಸಲು ಸಹಾಯವಾಗುತ್ತವೆ ಎಂಬುದನ್ನು ತಿಳಿಸಿದ್ದಾರೆ. ಕೆಲವು ಕಾಡುಗಳಲ್ಲಿ ಏನೇನು ವಸ್ತುಗಳು ಸಿಕ್ಕುತ್ತವೆಯೋ ಅವುಗಳನ್ನು ಆಯಾ ಪ್ರಾಂತದಲ್ಲೇ ಉಪಯೋಗವಾಗುವಂತೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು ಮತ್ತು ವನ ಸಂಪತ್ತನ್ನು ಹಾಳುಮಾಡತಕ್ಕ ಕೆಲವು ಜನರ ಮೇಲೆ ಉಗ್ರವಾದ ಕ್ರಮವನ್ನು ತೆಗೆದುಕೊಂಡು ಅರಣ್ಯವನ್ನು ಸಂರಕ್ಷಣೆ ಮಾಡಬೇಕೆಂದು ಹೇಳಿದ್ದಾರೆ. ಕಾಡಿನಲ್ಲಿ ಏನೇನು ಸಿಕ್ಕುತ್ತದೆಯೆಂದು ಶ್ರೀಮಾನ್ ಗೋಪಾಲಗೌಡರು ಹೇಳಿದರು. ಭದ್ರಾವತಿಯಲ್ಲಿರುವ ಕಬ್ಬಿಣದ ಕಾರ್ಖಾನೆಗೆ ಸಾವಿರಾರು ಏಕರೆ ಕಾಡನ್ನು ಕಡಿದು ಇದ್ದಲನ್ನು ಮಾಡಿಕೊಡುತ್ತಿರುವುದರಿಂದ ವನಸಂಪತ್ತು ಕಡಿಮೆಯಾಗುತ್ತದೆ. ಇದನ್ನು ಸರಿಯಾಗಿ ವ್ಯವಸ್ಥಿತ ರೀತಿಯಿಂದ ಮಾಡಿದರೆ ಇನ್ನೂ ಕಡಿಮೆ ಖರ್ಚಿನಿಂದ ಇದ್ದಲನ್ನು ಕೊಡುವುದಕ್ಕೂ ಹೆಚ್ಚು ಕಾಡನ್ನು ಬೆಳೆಸುವುದಕ್ಕೂ ಅವಕಾಶವಾಗುತ್ತದೆಂದು ಹೇಳಿದರು. ಈ ಹೊತ್ತು ಆ ಗುರಿಯನ್ನಿಟ್ಟುಕೊಂಡೇ ಭದ್ರಾವತಿಯಲ್ಲಿ ಆರು ಸಾವಿರ ಎಕರೆಯಷ್ಟು ಪ್ರತಿವರ್ಷವೂ ಬೆಳೆಸಿ, ಸೌದೆಯನ್ನೂ ಇದ್ದಲನ್ನೂ ಮಾಡುವ ಯೋಜನೆಯನ್ನು ಮಾಡಿರುವುದು. ಭದ್ರಾವತಿಯಲ್ಲಿ 15 ಸಾವಿರ ಏಕರೆಯಷ್ಟು ಹೊಸದಾಗಿ ಕಾಡನ್ನು ಬೆಳೆಸುವುದಕ್ಕೆ ಏರ್ಪಾಡು ಮಾಡಿದೆ. ಇದರಲ್ಲಿ ಪೂರ್ತಿಯಾಗಿ ಕಾಡೆಲ್ಲವನ್ನೂ ಕಡಿದು ಅಲ್ಲಿರುವ ಬೊಂಬುಗಳನ್ನು ಸುಟ್ಟು ಆ ಮೇಲೆ ಗಿಡ ಹಾಕುವುದೊಂದೇ ರೀತಿ. ಇನ್ನೊಂದು, degrades forests ಎಂದರೆ ಎಲ್ಲೆಲ್ಲಿ ಪಾಳು ಬಿದ್ದಿದೆಯೋ ಅಲ್ಲಿ ಆ ಕಾಡಿನಲ್ಲಿ ಸಸಿಗಳನ್ನು ಹಾಕಿ ಬೆಳೆಸುವುದು. ಹೀಗ ಎರಡು ರೀತಿ ಪ್ಲ್ಯಾಂಟೇರ್ಷ ನಡೆಯುತ್ತಿದೆ. ನಾನು ಮೊದಲೇ ಹೇಳಿದ ಹಾಗೆ, ಪಂಚವಾರ್ಷಿಕ ಯೋಜನೆಯ ಅಂಕಿ ಅಂಶಗಳ ಪ್ರಕಾರ 1,26,000 ಎಕರೆಗಳವರೆಗೆ ಮಾಡಿದ್ದೇವೆ. ಮೂರನೆಯ ಯೋಜನೆಯಲ್ಲಿಯೂ ಕೂಡ ಇದೇ ಹೆಚ್ಚಿನ ಕಾರ್ಯಕ್ರಮವನ್ನಿಟ್ಟುಕೊಂಡು ಬಂದಿದ್ದೇವೆ. ಇದುವರೆಗೆ ಎಷ್ಟು ಹಣ ಅರಣ್ಯದಿಂದ ಬರುತ್ತದೆಯೋ ಅದರಲ್ಲಿ ಕೊನೆಯ ಪಕ್ಷ ಮೂರನೆಯ ಒಂದು ಭಾಗ ಅಥವಾ ನಾಲ್ಕನೆಯ ಒಂದು ಭಾಗವನ್ನಾದರೂ ಕಾಡನ್ನು ಕಡಿದಿರುವ ಕಡೆ, ಕಾಡನ್ನು ಬೆಳೆಸುವುದಕ್ಕೆ ಉಪಯೋಗ ಮಾಡುತ್ತಿಲ್ಲ. ಪ್ರತಿ ವರ್ಷವೂ ಆಯವ್ಯಯದ ಪಟ್ಟಿಯಲ್ಲಿ ಹತ್ತು ಹದಿನೈದು ಲಕ್ಷ ರೂಪಾಯಿಗಳನ್ನೊದಗಿಸಬೇಕೆಂದು ಬೇಡಿಕೆಯನ್ನಿಟ್ಟು, ಅರಣ್ಯ ಸಂಪತ್ತಿನಿಂದ ಬರುವ ಹಣದಲ್ಲಿ ಸ್ವಲ್ಪ ಭಾಗವನ್ನಾದರೂ ಅರಣ್ಯಗಳನ್ನು ಬೆಳೆಸುವುದಕ್ಕೆ ವಿನಿಯೋಗ ಮಾಡಿದ್ದರೆ, ನಿಜವಾಗಿಯೂ ಮುಂದೆ ಬರತಕ್ಕ ಜನಾಂಗಕ್ಕೆ ನಾವು ಒಳ್ಳೆಯ ಆಸ್ತಿಯನ್ನು ಮಾಡಲವಕಾಶವಾಗುತ್ತದೆ. ಈಗಿನ ರೀತಿಯಲ್ಲಿ ಕೈಗಾರಿಕೆಗಳಿಗೆ ಮತ್ತು ವ್ಯವಸಾಯಕ್ಕೆ ಬೇಕಾದ ಹಾಗೆ ಕಾಡನ್ನು ಕಡಿಯುತ್ತಾ ಹೋದರೆ ಇನ್ನು ಹತ್ತು ವರ್ಷಗಳಲ್ಲಿ ಕಾಡೇ ಇರುವುದಿಲ್ಲ. ಕಾಡು ಬೆಳೆಯಬೇಕಾದರೆ 50-60 ವರ್ಷ ಬೇಕಾಗುತ್ತದೆ. ರಿಜರ್ವ್ ಆದ ಮರ ಎಂದರೆ ತೇಗದ ಮರ ಬೆಳೆಯಬೇಕಾದರೆ 80 ವರ್ಷ ಬೇಕಾಗುತ್ತದೆ. ಎಷ್ಟು ಪ್ರಮಾಣದಲ್ಲಿ ಕಾಡನ್ನು ಕಡಿಯುತ್ತಿದ್ದೇವೋ ಅದರ ಎರಡರಷ್ಟಾದರೂ ನೆಡಬೇಕು. 'ಒಂದು ಗಿಡವನ್ನು ಕಡೆದರೆ ಎರಡು ಗಿಡಗಳನ್ನು ನೆಡಿ' ಎಂದು ಹಿಂದಿನವರು ಹೇಳುತ್ತಿದ್ದರು. ಹಿಂದೆ ಜನರು ಸಾಲು ಮರಗಳನ್ನು ನೆಡುತ್ತಿದ್ದರು, ಹೊಲ ಗದ್ದೆಗಳಲ್ಲಿ ನಿತ್ಯ ಜೀವನಕ್ಕೆ, ವ್ಯವಸಾಯ ಉಪಕರಣಗಳಿಗೆ ಬೇಕೆಂದು ತೆವರುಗಳ ಮೇಲೆ, ಕಟ್ಟುಗಳ ಮೇಲೆ ಮರಗಳನ್ನು ಬೆಳೆಸುತ್ತಿದ್ದರು. ಆದರೆ ಈಗ ರಸ್ತೆಗಳ ಪಕ್ಕದಲ್ಲಿರುವ ಮರಗಳನ್ನೂ ಬೆಂಕಿಯಿಟ್ಟು ತೆಗೆದುಕೊಂಡು ಹೋಗುವುದು ಹೆಚ್ಚಾಗಿದೆ, Farm forests ವಿಚಾರವನ್ನು ಶ್ರೀಮಾನ್ ಗೋಪಾಲಗೌಡರು ಹೇಳಿದರು. ರೈತರು ಶ್ರದ್ಧೆ ವಹಿಸಿ ಅರಣ್ಯ ಸಂಪತ್ತನ್ನು ಹೆಚ್ಚಿಸಲು ಗಿಡಗಳನ್ನು ಹಾಕುವುದಾದರೆ, ಅವರೇ ಅದನ್ನು ಸಂರಕ್ಷಣೆ ಮಾಡಲು ಸರ್ಕಾರ ಸ್ವಲ್ಪ ಹಣ ಕೊಟ್ಟು ಉತ್ತೇಜನ ಕೊಡುತ್ತಿದ್ದೇವೆ. ಆಯಾ ಸ್ಥಳದ ಜನರು ಸಹಕರಿಸದೆ, ಗಿಡಗಳನ್ನು ಬೆಳಸದಿದ್ದರೆ, ಎಲ್ಲವನ್ನೂ ಸರ್ಕಾರವೇ ಮಾಡಬೇಕೆಂದರೆ ಕಷ್ಟವಾಗುತ್ತದೆ. ಆದ್ದರಿಂದ ಜನರು ಅರಣ್ಯಗಳ ಉಪಯೋಗವನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಕಾಡಿನಿಂದ ವ್ಯವಸಾಯದ ಮೇಲಿರುವ ಪ್ರಭಾವವನ್ನರಿತುಕೊಳ್ಳಬೇಕು. ಶ್ರೀಮಾನ್ ಕದರಿಯವರು ಹೇಳಿದಂತೆ, ಸಾಮಾನ್ಯ ಜನರಿಗೂ ಕಾಡು ಉಪಯುಕ್ತವಾಗಿದೆ, ವ್ಯವಸಾಯಕ್ಕೆ ಹೆಚ್ಚು ಸಹಕಾರಿಯಾಗಿದೆ.

5-30 P.M.

ಶ್ರೀಮಾನ್ ಕದಂ ಅವರು ಹೇಳಿದ ಹಾಗೆ ಎಲ್ಲಾ ರೀತಿಯಲ್ಲೂ ಸಾಮಾನ್ಯ ಮನುಷ್ಯರಿಗೆ ಇದು ಉಪಯುಕ್ತವಾಗಿದೆ ಅಂದರೆ ವ್ಯವಸಾಯಕ್ಕೆ ಇದು ಹೆಚ್ಚಿನ ಸಹಕಾರಿಯಾಗಿದೆ. ನಾನು ಮೊದಲೇ ಹೇಳಿದ ಹಾಗೆ ಇದಕ್ಕೂ ಮಳೆಗೂ ಒಂದು ಸಂಬಂಧವಿದೆ. ತುಂಗಭದ್ರಾ ಡ್ಯಾಂ ಹತ್ತಿರ ನೋಡಿದಾಗ ಅಲ್ಲಿ ಏನಾಗಿದೆ ಅಂದರೆ ಸಾಕಷ್ಟು ಕಾಡುಗಳಿಲ್ಲದೆ ವಿಶೇಷ ಮಳೆಯಿಂದ ಇನ್ನು ಕೆಲವು ಹತ್ತಾರು ವರ್ಷಗಳಲ್ಲಿ ತುಂಗಭದ್ರಾ ರಿಜರ್‌ವಾಯರ್ ಮುಚ್ಚಿಹೋಗುವ ಪರಿಸ್ಥಿತಿ ಬರುವ ಹಾಗೆ ಇದೆ. ಎಲ್ಲಿ ದಟ್ಟವಾದ ಕಾಡುಗಳು ಇರುತ್ತವೋ ಅಲ್ಲಿ ನೀರು ಬಹಳ ಮೇಲ್ಮಟ್ಟದಲ್ಲಿರುತ್ತದೆ. ರೈತನಿಗೆ ವ್ಯವಸಾಯಕ್ಕೆ ಬೇಕಾದಂಥ ಸಹಕಾರವನ್ನು ಕಾಡು ಸಂಪತ್ತಿನಿಂದ ಕೊಡುತ್ತಿದ್ದೇವೆ. ಅದಕ್ಕೋಸ್ಕರವಾಗಿ ಬೆಂಗಳೂರಿನ ಕೆಲವು ತಾಲ್ಲೂಕಿನ ಹಳ್ಳಿಗಳನ್ನು ಗಮನಕ್ಕೆ ತೆಗೆದುಕೊಂಡು ನೋಡುವುದಾದರೆ ಗಿಡಗಳನ್ನು ಹೆಚ್ಚಿಗೆ ಹಾಕುವುದರಿಂದ ನಮಗೆ ಹುಲ್ಲು ಸಂವೃದ್ಧಿಯಾಗಿ ಸಿಗುತ್ತದೆ. ಆದರೆ ನಮ್ಮ ಗೋಮಾಳಗಳು ಈಗ resting place ಗಳಾಗಿವೆಯೇ ವಿನಹ ದನಗಳಿಗೆ ಸಾಕಷ್ಟು ಮೇವು ದೊರೆಯುತ್ತಾ ಇಲ್ಲ. ಐದು ವರ್ಷಗಳಕಾಲ ಪ್ಲಾಂಟೇಷನ್ ಮಾಡಿಸಿದರೆ ಗಿಡಗಳು ಬೆಳೆಯುತ್ತವೆ. ಆದ್ದರಿಂದ ಬರತಕ್ಕ ಉತ್ಪತ್ತಿ ನಮ್ಮ ಪಂಚವಾರ್ಷಿಕ ಯೋಜನೆಗಳಿಗೆ ಆಗುತ್ತದೆ. ಅನೇಕರು ತಾವಾಗಿಯೇ ಬಂದು ಕಾಡನ್ನು ಕಡಿಯುತ್ತಿದ್ದಾರೆ. ಈ ದೃಷ್ಟಿಯಿಂದ ತಾತ್ಕಾಲಿಕವಾಗಿ ರೈತನಿಗೆ ಕೆಲವು ಕಾಲ ತೊಂದರೆಯಾಗಿದೆ ಎಂಬುದು ಸರ್ಕಾರಕ್ಕೆ ಗೊತ್ತಿದೆ. ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಹೇಳಿದ ಹಾಗೆ ಮಲೆನಾಡಿನ ಭಾಗಗಳಲ್ಲಿ ಎಲ್ಲಿ ಖಾಸಗೀ ಅರಣ್ಯಗಳಿದ್ದುವೋ ಅಲ್ಲಿ ವಿಶೇಷವಾದ ತೋಪುಗಳಿದ್ದುವು. ಈಗ ಅವನ್ನು ಸರ್ಕಾರಕ್ಕೆ ಸೇರಿಸಿ

(ಶ್ರೀ ಬಿ. ರಾಚಯ್ಯ)

ಕೊಂಡು ರಿಜರ್ವ್ ಫಾರೆಸ್ಟ್ ಮಾಡಿದ್ದೇವೆ. ಅದರಿಂದ ದನಕರುಗಳಿಗೆ ಬಹಳ ಕಷ್ಟವಾಗಿದೆ ಎಂಬುದು ಸರ್ಕಾರಕ್ಕೆ ತಿಳಿದಿದೆ. ಅದೂ ಅಲ್ಲದೆ ಸರ್ಕಾರದವರು ಮಲೆನಾಡು ಭಾಗಗಳಲ್ಲಿ ಮನೆಗಳನ್ನು ಕಟ್ಟುವುದಕ್ಕೋಸ್ಕರ ಜಮೀನು ಕೊಡುತ್ತಿದ್ದಾರೆ. ವಿವಿಧ ಸಾಮಾನುಗಳನ್ನು ಇಟ್ಟುಕೊಂಡರೆ ದನಕರುಗಳನ್ನು ಕಟ್ಟಿಕೊಳ್ಳುವುದಕ್ಕೋಸ್ಕರ ಅಲ್ಲಿನ ಜಮೀನುಗಳನ್ನು ಕೊಡುತ್ತಿಲ್ಲವೆಂದು ಹೇಳಿದರು. ನಾನು ಹೇಳುವುದಿಷ್ಟೆ. ಮಲೆನಾಡಿನಲ್ಲಿ ಯಾವ ಯಾವ ರೀತಿಯಲ್ಲಿ ರಿಯಾಯತಿಗಳನ್ನು ಈಗಾಗಲೇ ಕೊಟ್ಟಿದ್ದೇವೋ ಅದನ್ನು ಮೊಟಕು ಮಾಡುವ ಇಚ್ಛೆ ಸರ್ಕಾರಕ್ಕಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಆ ಮಾತನ್ನು 'ವಿತ್‌ಡ್ರಾ' ಮಾಡಬೇಕೆಂದು ತಿಳಿಸುತ್ತೇನೆ. ಜಮೀನುಗಳನ್ನು ಕೊಟ್ಟಮೇಲೆ ಎಲ್ಲಿ ಪ್ಲಾಂಟೇಷನ್ ಇವೆಯೋ ಆ ಕಡೆಗಳಲ್ಲಿ ಜನಗಳನ್ನ ಬಿಡುತ್ತಿಲ್ಲ. ಏಕೆಂದರೆ ಈಗಾಗಲೇ ಕಾಡುಮರಗಳನ್ನು ಹೆಚ್ಚಾಗಿ ಕಡಿಯುವವರ ಮೇಲೆ ಉಗ್ರವಾದ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಕಾಡಿನ ಹಿತದೃಷ್ಟಿಯಿಂದ ಮತ್ತು ಅರಣ್ಯ ಸಂಪತ್ತು ಹೆಚ್ಚಿಸುವ ದೃಷ್ಟಿಯಿಂದ ತಪ್ಪಿತಸ್ಥರ ಮೇಲೆ ಒಂದು ವಿಜಿಲೆನ್ಸ್ ಇಡಬೇಕೆಂದು ಶ್ರೀಮಾನ್ ಕದಂ ಅವರು ಹೇಳಿದರು. ಬಡವರಿಗೆ ಜಮೀನು ಕೊಡಬೇಕು. ಅವರ ಹಿತದೃಷ್ಟಿ ಸರ್ಕಾರಕ್ಕೆ ಇರಬೇಕು ಎಂಬುದಾಗಿ ನಾನೂ ಸಹ ಹೋದ ವರ್ಷ ಈ ಸಭೆಯ ಸದಸ್ಯನಾಗಿ ಎಷ್ಟೋ ಸಾರಿ ಹೇಳುತ್ತಿದ್ದೆ. ಮುಂದೆ ಅರಣ್ಯವನ್ನು ಇದೇ ರೀತಿ ಬಿಟ್ಟರೆ ನಿಜವಾಗಿ ಚೆನ್ನಾಗಿ ಕಾಡನ್ನು ನಾವು ಸಂರಕ್ಷಣೆ ಮಾಡುವುದಕ್ಕಾಗುವುದಿಲ್ಲವೆಂದು ನಾನು ಹೇಳುತ್ತೇನೆ. ಏಕೆಂದರೆ ಅನೇಕರು ಬಡವರು ಇದ್ದಾರೆ. ಮನೆಗಳನ್ನು ನಾವೇ ಕಟ್ಟಿಕೊಳ್ಳುತ್ತೇವೆಂದು ಮುಂದೆ ಮುಂದೆ ಬಂದು ಯಾರ್‍ಯಾರು ಕೇಳುತ್ತಿದ್ದಾರೋ ಅಂತಹವರಿಗೆ ಯಾರಿಗೂ ನಾವು ರೆಫ್ಯೂಜ್ ಮಾಡಲಿಲ್ಲ. ಇನ್ನು ನಾರ್ತ್‌ಕೆನರಾ ಜಿಲ್ಲೆಯಿಂದ ಇನ್ನೊಂದು ಬೇಡಿಕೆ ಬರುತ್ತಿದೆ. ಅಲ್ಲಿ ಸುಮಾರು ಶೇ. 80 ಭಾಗದಷ್ಟು ಕಾಡು ಇದೆ. ಅಷ್ಟು ಕಾಡು ಅಲ್ಲಿಯೇ ಇರಬೇಕು. ಜನಗಳೂ ಸಹ ಅಲ್ಲಿಯೇ ಇರಬೇಕೆಂದು ಕೇಳುತ್ತಿದ್ದಾರೆ.

Sri B. P. KADAM.—In Karwar Taluk where nearly 5,000 people were the victims of food—they lost their houses and asked for 5 guntas of land in the minor forest. Is it not a fact that their request has been rejected?

ಶ್ರೀ ಬಿ. ರಾಚಯ್ಯ.—ಆ ವಿಷಯ ಸಾಧ್ಯವಾದ ಮಟ್ಟಿಗೆ ನನ್ನ ಗಮನಕ್ಕೆ ಬಂದಿಲ್ಲ. ಸಾಮಾನ್ಯವಾಗಿ ಕೆಲವರಿಗೆ ಅಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ಕೊಟ್ಟಿದ್ದೇವೆ. ಮಲೆನಾಡಿನ ಭಾಗದಲ್ಲಿ ಹವ್ಯಾಸ ಹೀಗಿದೆ. ಕೆಲವು ಕಡೆಗಳಲ್ಲಿ ಕಾರವಾರದಲ್ಲಿ ಈ ರೀತಿ ಇರಬಹುದು. ಚಿಕ್ಕಮಗಳೂರು, ಇತರೇ ಜಿಲ್ಲೆಗಳಲ್ಲಿ ದರಖಾಸ್ತುಗಳಲ್ಲಿ ಬಡವರಿಂದ ಅರ್ಜಿಗಳು ಏನಾದರೂ ಬಂದರೆ ಅವರಿಗೂ ಮರಗಳನ್ನು ಕೊಡುತ್ತಿದ್ದೇವೆ. ಹರಿಜನರಿಗೂ ಕೊಡುತ್ತಿದ್ದೇವೆ. 1200 ರೂಪಾಯಿಗಳವರೆಗೆ ಎಂದು ಒಂದು ಮೊಲ್ತಿ ನಿಗದಿ ಮಾಡಿದ್ದೇವೆ. ಅದು ಈಗ 30 ಸಾವಿರ ರೂಪಾಯಿಗಳ ವ್ಯಾಲ್ಯು ಆಗಿದೆ. ಅಂದಮೇಲೆ ಈಗ ಅರಣ್ಯ ಸಂಪತ್ತು ಏನಿದೆ ಅದು ರಕ್ಷಣೆಯಾಗುವಂತೆ ಅನೇಕ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಬಡವರ ಮೇಲೆ ಅನುಕಂಪವಿಲ್ಲ ಎಂದು ಅವರಿಗೆ ವಿರೋಧವಾಗಿ ಸರ್ಕಾರ ಮಾಡುತ್ತಿದೆಯೆಂದು ಯಾವ ಮಾನ್ಯ ಸದಸ್ಯರೂ ತಿಳಿಯಬಾರದು.

Sri B. P. KADAM.—The lands that they have asked for have no precious timber; they contain only bushes and throns. I referred to such forests

Sri B. RACHAIAH.—I did not refer to Karwar district, but to some other districts. ಅವರಿಗೆ ಮಲೆನಾಡಿನಲ್ಲಿ ಇನ್ನೊಂದು ಸೊಪ್ಪಿನ ತೋಪನ್ನು ಕೊಟ್ಟಿದ್ದೇವೆ. ಅದೇನೂ ಆಗಲಿಲ್ಲ. ಅದನ್ನು ಸಂರಕ್ಷಣೆ ಮಾಡಬೇಕು. ಅದಕ್ಕೆ ತಕ್ಕ ಕಾನೂನು ಇದ್ದರೂ ಅದನ್ನು ಹಾಳುಮಾಡಿ ಈಗ ಮೈದಾನ ರೂಪವಾಗಿ ಉಳಿದಿದೆ. ಮುಖ್ಯವಾಗಿ ಮಲೆನಾಡಿನಲ್ಲಿರತಕ್ಕ ರೈತರಿಗೆ ಏನೇನು ಅನುಕೂಲತೆಗಳನ್ನು ಕೊಡಬೇಕೋ ಅವೆಲ್ಲವನ್ನೂ ಕೊಡುವ ವಿಷಯದಲ್ಲಿ ಸರ್ಕಾರ ಎಂದಿಗೂ ಮೊಟಕು ಮಾಡುವುದಿಲ್ಲ. ಈ ಬಗ್ಗೆ ಮಾನ್ಯ ಸದಸ್ಯರ ಸಹಕಾರ ಜಾಸ್ತಿ ಬೇಕು. ಪ್ಲಾಂಟೇಷನ್‌ಗಳಲ್ಲಿ ದನಗಳನ್ನು, ಕುರಿ ಮೇಕೆಗಳನ್ನು ಬಿಡುವ ಸಂದರ್ಭದಲ್ಲಿ ರೈತರಿಗೆ ಸ್ವಲ್ಪ ಮಟ್ಟಿಗೆ ತಿಳುವಳಿಕೆಯನ್ನು ಮಾನ್ಯ ಸದಸ್ಯರೂ ಕೂಡ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕಾಡಿನಲ್ಲಿ ಉತ್ಪತ್ತಿಯಾದಂಥ ಟಿಂಬರ್ ಆಗಲೇ ಬೊಂಬುಗಳಾಗಲೀ ರೈತರಿಗೆ ಹಂಚುವ ವಿಷಯದಲ್ಲಿ ಮೊಟಕು ಮಾಡುವುದಿಲ್ಲ. ಎಲ್ಲಿ ಕಳ್ಳತನ ಹೆಚ್ಚಾಗಿರುತ್ತದೆಯೋ ಅಲ್ಲಿ ಅದನ್ನು ತಡೆಗಟ್ಟುವುದರಿಂದ ಉತ್ಪತ್ತಿಯ ಸುಮಾರು ¼ ನೇ ಹಣಬರಬಹುದು ಎಂದು ನನ್ನ ಅಭಿಪ್ರಾಯ. ಪಟ್ಟಣಗಳಲ್ಲಿ ಅನೇಕ ಊರುಗಳಲ್ಲಿ ಅಧಿಕಾರಿಗಳು, ಪೋಲಿಸಿನವರು, ಕೋರ್ಟುಗಳು ಬೇಕಾದಷ್ಟು ಇದ್ದರೂ ಅಂತಹ ಕಡೆಯೇ ವಿಶೇಷವಾಗಿ ಕಳ್ಳತನಗಳು ಆಗುತ್ತಿರುವಾಗ ಗ್ರಾಮಾಂತರ ಪ್ರದೇಶಗಳಲ್ಲಿ, ದೊಡ್ಡ ದೊಡ್ಡ ಕಾಡುಗಳು ಇರುವ ಪ್ರದೇಶಗಳಲ್ಲಿ ಸುಮಾರು 3 ಸಾವಿರದಿಂದ 10 ಸಾವಿರದ ಎಕರೆಗಳಿರುವ ಪ್ರದೇಶಗಳಲ್ಲಿ ಕೇವಲ ಇಬ್ಬರು ಮೂವರು ಗಾರ್ಡುಗಳು ಇದ್ದರೆ, ಕಾಡನ್ನು ಹೇಗೆ ಸಂರಕ್ಷಣೆ ಅವರು ಮಾಡಿಯಾರು ಎಂಬುದನ್ನು ನಾವು ಚೆನ್ನಾಗಿ ಗಮನಿಸಬೇಕಾಗಿದೆ.

ಆದರಿಂದಲೇ ಅಂತಹ ಪ್ರದೇಶಗಳಲ್ಲಿ ಇನ್ನೂ ಜಾಸ್ತಿಯಾಗಿ ಕಳ್ಳತನಗಳಾಗುತ್ತಿವೆ. ಆದ್ದರಿಂದ ಅಲ್ಲಿನ ಸಿಬ್ಬಂದಿಯನ್ನು ಹೆಚ್ಚಿಸಬೇಕು. ಆಗ ಅಲ್ಲಿನ ಬೆಲೆ ಬಾಳುವಂತಹ ಮರ ಮುಟ್ಟುಗಳನ್ನು ಚೆನ್ನಾಗಿ ಸಂರಕ್ಷಣೆ ಮಾಡಬಹುದು. ಏಕೆಂದರೆ ಕೆಲವು ಎಜೆನ್ಸಿದಾರರು ಕಂಟ್ರಾಕ್ಟುದಾರರು, ಗಂಧ ಮತ್ತು ತೇಗದ ಮರಗಳನ್ನು ಕಳ್ಳತನದಲ್ಲಿ ಲಾರಿಗಳಲ್ಲಿಯೇ ಇತ್ತೀಚೆಗೆ

ಸಾಗಿಸುತ್ತಿದ್ದಾರೆ. ಅಂಥಾದ್ದನ್ನು ಮೊದಲು ತಪ್ಪಿಸಬೇಕು. ಇನ್ನು ಕೆಲವು ಕಡೆಗಳಲ್ಲಿ ರೈಫಲ್‌ಗಳಿಂದಲೇ ಅಧಿಕಾರಿಗಳನ್ನು ಹೆದರಿಸಿದ್ದಾರೆ. ಇಷ್ಟೆಲ್ಲಾ ಇರುವ ಕಾಲದಲ್ಲಿ ಅಲ್ಲಿನ ಅಧಿಕಾರಿಗಳಿಗೆ ಸರ್ಚ್ ವಾರೆಂಟ್ ಇಷ್ಯೂ ಮಾಡುವುದಕ್ಕೆ ಪವರ್ಸ್ ಕೊಟ್ಟಿರಲಿಲ್ಲ. ಇಂತಹ ಕಡೆ ಗಂಧದ ಮರ ಮತ್ತು ತೇಗದ ಮರಗಳನ್ನು ಹೆಚ್ಚು ಬೆಳೆಯಲು ಈಗ ಲೈಸೆನ್ಸ್ ಕೊಟ್ಟಿದ್ದೇವೆ. ಅಲ್ಲಿಯ ಲೋಕಲ್ ಅಫೀಸರ್‌ಗಳ ಲಂಚಕೋರತನದಿಂದ ಆ ರೀತಿಯ ಕಳ್ಳತನಗಳು ನಡೆಯುತ್ತಿತ್ತು. ಅದನ್ನು ಈಗ ತಪ್ಪಿಸುವುದಕ್ಕೋಸ್ಕರ ನಮ್ಮ ಅರಣ್ಯ ಶಾಖಾ ಅಧಿಕಾರಿಗಳು ಸೂಕ್ತವಾದ ಕ್ರಮಗಳನ್ನು ತೆಗೆದುಕೊಂಡು ನಿಸ್ವಾತ್ರತೆಯಿಂದ ಕೆಲಸ ಮಾಡುವವರಿದ್ದಾರೆ. Men and Matters ತಿಳಿಯಬೇಕಾದರೆ ಸ್ವಲ್ಪ ಕಾಲ ಇಂತಹ ಕೇಸುಗಳನ್ನು ಹಿಡಿಯುತ್ತಿದ್ದೇವೆ. ಮುಖ್ಯವಾಗಿ ಈಗ ವನ ಸಂಪತ್ತನ್ನು ಉಳಿಸಬೇಕು. ಅದರಿರಿದ ಬರತಕ್ಕ ಉತ್ಪತ್ತಿ ನೇರವಾಗಿ ಸರ್ಕಾರಕ್ಕೆ ಬರಬೇಕೆಂಬ ಏನೇನು ಸದುದ್ದೇಶದಿಂದ ಇಂತಹ ಕಾರ್ಯ ಕ್ರಮಗಳನ್ನು ಇಟ್ಟುಕೊಂಡಿದ್ದೇವೋ ಅ ಒಂದು ಉದ್ದೇಶದಿಂದ ಈ ಮಸೂದೆಯಲ್ಲಿ ಕೆಲವು ಉಗ್ರವಾದ ಪ್ರಾವಿಷನ್ನುಗಳನ್ನು ಇಟ್ಟಿದ್ದೇವೆ. ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕಾಗಿರುವುದರಿಂದ ಈಗ ಹೆಚ್ಚು ಕಾಲವನ್ನು ಉತ್ತರ ಕೊಡುವುದಕ್ಕೆ ತೆಗೆದುಕೊಳ್ಳದೆ ಒಂದೇ ಒಂದು ಮನವಿಯನ್ನು ಮಾನ್ಯ ಸದಸ್ಯರಲ್ಲಿ ಮಾಡುತ್ತಿದ್ದೇನೆ. ಅದು ಏನೆಂದರೆ ಕೆಲವು ಅಧಿಕಾರಿಗಳು ಬಹುಶಃ ಫಾರೆಸ್ಟ್ ಇಲಾಖೆಯಲ್ಲಿ ಒಂದು ವರ್ಷದವರೆಗೆ ಡೆಹರಾಡೂನಿನಲ್ಲಿ ಟ್ರೈನಿಂಗ್ ಪಡೆಯುತ್ತಿದ್ದಾರೆ. ಎಲ್ಲ ಅಧಿಕಾರಿಗಳಿಗೂ ಈ ಅವಕಾಶ ಸಿಗಬೇಕು ಎಂದು ಕೇಳುತ್ತಿದ್ದಾರೆ. ಅದಕ್ಕೋಸ್ಕರ ಒಂದು ಕಾಲೇಜನ್ನು ತೆಗೆದರೆ ಎಲ್ಲಿ ಇವರೆಲ್ಲರಿಗೂ ಕೆಲಸ ಕೊಡುವುದು ಎಂಬುದಾಗಿ ನಾನು ಕೇಳುತ್ತೇನೆ. ಈಗ ಟ್ರೈನಿಂಗ್ ಆಗಿ ಬಂದವರಿಗೇನು ಮಾಡುವುದು? ಡೆಪ್ಯೂಟಿ ಕಮಿಷನರಿಗೆ ಸಂಬಂಧಪಟ್ಟ ಹಾಗೆ ಡೆಹರಾಡೂನಿನಲ್ಲಿ ಒಂದು ಕಾಲೇಜು ಇದೆ. ನಮ್ಮಲ್ಲಿ ಸುಮಾರು 3 ಸೆಂಟರುಗಳನ್ನು ಮಾಡಬೇಕಾಗಿದೆ. ಈಗ ಸಾಮಾನ್ಯವಾಗಿ ಒಂದು ಕಾಲೇಜನ್ನು ಸ್ಥಾಪನೆ ಮಾಡಬೇಕಾಗಿದ್ದರೆ, ಈ ಅರಣ್ಯ ಇಲಾಖೆಯಲ್ಲಿ ಮೊದಲು ಜನಗಳನ್ನು ಸೇರಿಸಿಕೊಳ್ಳುತ್ತೇವೆ ಎನ್ನೋಣ. ಆದರೆ, ಇದಕ್ಕೆ ಆಗುವ ಖರ್ಚು ಎಷ್ಟು ಎಂಬುದನ್ನು ನೋಡಿದಾಗ ಈಗ ಇದು ಸಾಧ್ಯವಾಗಲಿಲ್ಲವೆಂಬ ತೀರ್ಮಾನಕ್ಕೆ ಬರಬೇಕಾಗಿದೆ. ಆದರೆ ಎಲ್ಲರನ್ನೂ ಡೆಹರಾಡೂನಿಗೆ ಕಳುಹಿಸುವ ಒಂದು ಅವಕಾಶವನ್ನು ಮಾಡಿ ಕೊಡಬೇಕಾದರೆ ಖರ್ಚು ಎಷ್ಟಾಗುತ್ತದೆಂಬುದನ್ನು ಮಾನ್ಯ ಸದಸ್ಯರು ಗಮನಿಸಬೇಕು. ಅದು ಸಾಧ್ಯವೇ ಇಲ್ಲ. ಅದಕ್ಕೋಸ್ಕರ ಇಲ್ಲಿಯೇ ಸೆಲೆಕ್ಷನ್ ಮಾಡಿ ಕೆಲವರನ್ನು ಕಳುಹಿಸಿ ಕೊಡುತ್ತೇವೆ. ಆ ರೀತಿ ಕಳುಹಿಸಿ ಕೊಡುವ ಕಾಲದಲ್ಲಿ ಸ್ಟೈಪೆಂಡ್ ಏನು ಕೊಡಬೇಕೋ ಅದನ್ನು ಅವರಿಗೆ ಕೊಡುತ್ತೇವೆ. ಅಲ್ಲಿಂದ ಅವರು ಇಲ್ಲಿಗೆ ಬಂದ ಮೇಲೆ ಕೆಲಸಗಳನ್ನು ನೇರವಾಗಿ ಕೊಡುತ್ತಿದ್ದೇವೆ. ಆದ್ದರಿಂದ ಹಿಂದೆ ಏನೊಂದು ಮನಾಪಲಿ ಮಾಡಿಕೊಂಡಿದ್ದರೋ ಅದು ಈಗ ಆಗುತ್ತಿಲ್ಲ. ಇದು ಸರ್ವತ ಹಿತದೃಷ್ಟಿಯಿಂದ ಕೂಡಿದ ಇಲಾಖೆಯೆಂದು ಹೇಳಿದರೆ ಏನೂ ತಪ್ಪಾಗುವುದಿಲ್ಲವೆಂದು ನಾನು ಹೇಳುತ್ತೇನೆ. ಇದು ಎಲ್ಲರಿಗೂ ಗೊತ್ತಾಗಿದೆ. ಈಗ ಈ ಇಲಾಖೆಯಲ್ಲಿ ಒಂದು ಭದ್ರತೆಯ ಆಡಳಿತವನ್ನು ಅನುಸರಿಸಬೇಕಾಗಿರುವುದರಿಂದ ಸರ್ಕಾರದ ಜವಾಬ್ದಾರಿ ಬಹಳ ಹೆಚ್ಚಿನ ಮಟ್ಟದಲ್ಲಿದೆ. ಕೆಲವು ಕಡೆ ನೀವು ಹೇಳಿದಹಾಗೆ ಕೆಲವು ಅಧಿಕಾರಿಗಳು ಲಂಚ ತೆಗೆದುಕೊಳ್ಳುತ್ತಾರೆ. ಅದು ನಿಜ. ಅಂತಹವರೂ ಇದ್ದಾರೆ. ಆದರೆ ಮತ್ತೆ ಕೆಲವು ಕಡೆಗಳಲ್ಲಿ ಒಳ್ಳೆಯ ಅಧಿಕಾರಿಗಳು ಇದ್ದಾರೆ. ಅಂತಹವರಿಗೆ ಒಂದು ಒಳ್ಳೆಯ ಮಾತನ್ನು ಹೇಳಿ ಅವರ ಬೆನ್ನನ್ನು ತಟ್ಟದೇ ಇದ್ದರೆ ನಿಜವಾಗಿ ನಿಷ್ಠೆಯಿಂದ ಅವರು ಕೆಲಸ ಮಾಡುತ್ತಾರೆಯೇ ಎಂದು ನಾನಾದರೂ ಕೇಳುತ್ತೇನೆ.

ಇಲಾಖೆಯಲ್ಲಿರತಕ್ಕವರೆಲ್ಲರೂ ಕಳ್ಳರೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಶ್ರೀ ಕದಂ ಅವರು ಈ ಕಾನೂನಿನಲ್ಲೇ ಅಂಥ ಅಕ್ರಮ ನಡವಳಿಕೆಗಳನ್ನು ತಡೆಗಟ್ಟಲು ಸೂಕ್ತ ಪ್ರಾವಿಜನ್ನನ್ನು ಅಳವಡಿಸಬೇಕೆಂದು ಹೇಳಿದರು. ಆದರೆ ಅದನ್ನು ಇದರಲ್ಲಿ ಸೇರಿಸುವುದಕ್ಕಾಗುವುದಿಲ್ಲ. ಅದಕ್ಕೇ ಪ್ರತ್ಯೇಕ C. C. A. ರೂಲ್ಸ್ ಎಂಬ ಕಾನೂನಿದೆ. ಈ ದಿವಸ ನಮ್ಮಲ್ಲಿ ಆಂಟಿಕರಪ್ಷನ್ ಎಂಬ ಇಲಾಖೆಯೊಂದಿದೆ. ಆದರೆ ಆ ಇಲಾಖೆಯಿರುವುದು ಇಂಥಾದ್ದನ್ನೆಲ್ಲ ತಡೆಗಟ್ಟುವುದಕ್ಕೆ. ಆದರೆ ಈ ದಿವಸ ಆ ಇಲಾಖೆಯವರು ಸಹ ಯಾವುದೋ ಒಂದು ಸಂದರ್ಭದಲ್ಲಿ ಕಳುಹಿಸಿದ್ದಾಗ ಅಲ್ಲಿ ಏನೂ ಸಿಕ್ಕಲಿಲ್ಲ ಎಂತ ಹೇಳಿ ಅವರೂ ಸಹ ನಮ್ಮ ಕಣ್ಣಿಗೆ ಮಣ್ಣನ್ನೆರಚುವ ಕೆಲಸ ಮಾಡಿದ್ದಾರೆ. ಪರಿಸ್ಥಿತಿ ಹೀಗೆಲ್ಲಾ ಇರುವುದರಿಂದ ನಾವು ಯಾರೂ ಏನನ್ನೂ ಹೀಗೆ ಮಾಡುತ್ತೇವೆಂದು ಧೈರ್ಯವಾಗಿ ಹೇಳಲು ಆಗುವುದಿಲ್ಲ.

ಆದರೆ ಮೊನ್ನೆ ಯಾರೋ ಬಂದು ಇಂಥ ಕಡೆ ಹೀಗೆ ಕಳ್ಳತನ ನಡೆಯುತ್ತಿದೆ ಎಂತ ನನಗೆ ತಿಳಿಸಿದರು. ಆ ಬಗ್ಗೆ ಸೂಕ್ತ ಕ್ರಮ ಕೈಗೊಂಡಿದೆ. ಅವರೆಲ್ಲರೂ ಈಗ ಸಿಕ್ಕಿಬಿದ್ದಿದ್ದಾರೆ. ವಿಚಾರಣೆ ನಡೆಯುತ್ತಿದೆ. ಸಾಧ್ಯವಾದಮಟ್ಟಿಗೂ ಅಕ್ರಮ ನಡುವಳಿಕೆಯನ್ನು ತಡೆಗಟ್ಟಲು ಈ ಕಾನೂನಿನಲ್ಲಿ ಸೂಕ್ತ ಪ್ರಾವಿಜನ್‌ಗಳನ್ನು ಅಡಕಮಾಡಿದೆ. ಅಧಿಕಾರಿಗಳಿಗೆ ಹೆಚ್ಚಿನ ರಕ್ಷಣೆ ಕೊಡತಕ್ಕ ಬಗ್ಗೆ ಆ ವಿಚಾರಗಳನ್ನೂ ಸಹ ಇದರಲ್ಲಿ ಅಡಕಮಾಡಲಾಗಿದೆ. ಈ ಹಿಂದೆ ಕೆಲವರಿಗೆ ಬಳ್ಳಾರಿ–ಕೊಳ್ಳೇಗಾಲ ಇಲ್ಲೆಲ್ಲಾ ಗಂಧದ ಮರಗಳನ್ನು ಸಾಗಿಸಲು ಪರ್ಮಿಟ್ ಕೊಡಲಾಗಿತ್ತು. ಅವರು ಅದರ ಮರೆಯಲ್ಲಿ ಆ ಅವಕಾಶವನ್ನು ದುರುಪಯೋಗಪಡಿಸಿಕೊಂಡಿದ್ದಾರೆಂಬ ದೂರು ಸಹ ಬಂತು. ಅವರು ಕಾಡಿನಲ್ಲಿದ್ದ ಮರಗಳನ್ನೆಲ್ಲಾ ಕತ್ತರಿಸಿ ಸಾಗಿಸುತ್ತಿದ್ದರು. ಈಗ ಅಂಥಾದ್ದಕ್ಕೆಲ್ಲ ಅವಕಾಶವಾಗದಂತೆ ಈ ಬಿಲ್ಲಿನಲ್ಲಿ ಸೂಕ್ತ ತಿದ್ದುಪಡಿ ಮಾಡಿರುತ್ತೆ. ಈಗ ಗಂಧದ ಮರ ಎಲ್ಲೇ ಬೆಳೆದಿರಲಿ ಅದರ ಸಂಪೂರ್ಣ ಸ್ವಾಮ್ಯ ಸರ್ಕಾರಕ್ಕಿರುವಂತೆ ಮಾಡಿದ್ದೇವೆ. ಏತಕ್ಕೆಂದರೆ ಈ ಮರ ಬಹಳ ಕಳವಿನಲ್ಲಿ ಸಾಗಿಹೋಗುತ್ತಿತ್ತು. ಮೊನ್ನೆತಾನೆ ಯಾರೋ ಒಬ್ಬರು ಹೊಸಕೋಟೆಯಲ್ಲಿ ಗಂಧದ ಮರಗಳನ್ನು ಕತ್ತರಿಸಿ ಅವುಗಳಿಗೆ ಸುಣ್ಣ ಬಳಿದು ವಾಸನೆಬರದಹಂತೆ ಮಾಡಿ ಅವುಗಳನ್ನು ಎಲ್ಲಿಗೋ ಸಾಗಿಸಿಕೊಂಡು ಹೋಗಲು ಬಸ್ ಸ್ಟಾಂಡಿನಲ್ಲಿದ್ದಾಗ ಅತನನ್ನು ಹಿಡಿದು ಕೋರ್ಟಿನಲ್ಲಿ ಕೇಸ್ ಹಾಕಲಾಯಿತು. ಆದರೆ ಆ ಕೋರ್ಟಿನಲ್ಲಿ

(ಶ್ರೀ ಬಿ. ರಾಚಯ್ಯ)

mere possession is not an offence ಎಂತ ಹೇಳಿ ತೀರ್ಮಾನ ಕೊಟ್ಟಿದ್ದಾರೆ. ಮುಂದೆ ಹೀಗಾಗದಿರಲು ಏನು ತಿದ್ದುಪಡಿಮಾಡಬೇಕೋ ಅದನ್ನೂ ಮಾಡಿದ್ದೇವೆ.

ಈ ಬಿಲ್ಲು ಈಗ ಸೆಲೆಕ್ಟ್ ಸಮಿತಿ ಮುಂದೆ ಹೋಗಿ ಮತ್ತಷ್ಟು ಪರಿಪಕ್ವವಾಗಿ ಬರುತ್ತದೆ. ಇಲ್ಲಿಯ ತನಕ ಈ ಸಭೆಯ ಮಾನ್ಯ ಸದಸ್ಯರೆಲ್ಲರೂ ಏನೇನು ಸಲಹೆ ಮಾಡಿದ್ದಾರೋ ಅವುಗಳನ್ನೆಲ್ಲಾ ಸೆಲೆಕ್ಟ್ ಸಮಿತಿಯವರ ಗಮನಕ್ಕೆ ತರಲಾಗುತ್ತದೆ. ಆ ಸೆಲೆಕ್ಟ್ ಸಮಿತಿಯವರು ತಿದ್ದುಪಡಿ ಮಾಡದಂಥ ಮಸೂದೆ ಮತ್ತೆ ತಮ್ಮೆಲ್ಲರ ಮುಂದೆ ಬರುತ್ತದೆ. ಆದ್ದರಿಂದ ತಾವೆಲ್ಲರೂ ಇದನ್ನು ಸೆಲೆಕ್ಟ್ ಸಮಿತಿಗೆ ರೆಫರ್ ಮಾಡಲು ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

MR. DEPUTY SPEAKER.—The question is moved:

"That the Mysore Forest Bill, 1962 be taken into consideration."

The motion was adopted.

Motion to refer to Select Committee.

Sri B. RACHIAH.—Sir, I move:

"That the Mysore Forest Bill, 1962 be referred to a Joint Select Committee consisting of a total number of 20 members (15 from this House and 5 from the Legislative Council) that the concurrence of the Legislative Council be obtained therefor and that the following members of this House shall be members of the Joint Select Committee, *viz.*,

Sriyuths:

1. S. Sivappa
2. K. H. Ranganath
3. Siddaiah Kasimath
4. S. Gopala Gowda
5. G. V. Gowda
6. S. B. Sowdagar
7. V. S. Lakshmikanthappa
8. Smt. Vasanthalata V. Mirjankar
9. Ganji Veerappa
10. A. Sharanappa
11. Smt. B. L. Subbamma
12. S. Subbayya Naik
13. D. M. Siddaiah
14. N. Hutchmasthy Gowda
15 A. P. Appanna.

MR. DEPUTY SPEAKER.—Motion moved:—

"That the Mysore Forest Bill, 1962 be referred to a Joint Select Committee consisting of a total number of 20 members (15 from this House and 5 from the Legislative Council) that the concurrence of the Legislative Council be obtained therefor and that the following members of the House shall be members of the Joint Select Committee, *viz.*,

Sriyuths:

1. S. Sivappa
2. K. H. Ranganath
3. Siddaiah Kasimath
4. S. Gopala Gowda
5. G. V. Gowda
6. S. B. Sowdagar
7. V. S. Lakshmikanthappa
8. Smt. Vasanthalata V. Mirjankar
9. Ganji Veerappa
10. A. Sharanappa
11. Smt. B. L. Subbamma
12. S. Subbayya Naika
13. D. M. Siddaiah
14. N. Hutchmasthy Gowda
15. A. P. Appanna."

The motion was adopted.

MR. DEPUTY SPEAKER.—Further, I wish to say that under sub-rule (2) of Rule 240 of the Rules of Procedure, the Minister in-charge of the Department to which the Bill relates who is also the member in-charge of the Bill as well as the Minister for law, have to be nominated as members of the Joint Select Committee, and accordingly I do nominate them on the Joint Select Committee. The House will now rise to meet at at 8-30 A. M. to-morrow.

The House adjourned at Forty-five minutes past Five of the Clock to meet again Thirty minutes past Eight of the Clock on Saturday, the 15th December 1962.

WD 178—GBPC—900-16-8-63.